ಮಂದಿರ ಹಾಳು ಮಾಡದಿರಿ ಏ ಮನುಜರೇ........

ನಮಗೆ ಬದುಕು ಕಲಿಸುವ ಪಾಠವನ್ನು ಯಾವ ವಿದ್ಯಾಲಯದಲ್ಲೂ
ಯಾವ ಶಿಕ್ಷಕರು ಕಲಿಸಲಾರರು ಆದರೆ, ಬದುಕುವ ವಿಧಾನವನ್ನು
ಪ್ರತಿಯೊಂದು ವಿದ್ಯಾಲಯದ , ಪ್ರತಿಯೊಬ್ಬ ಶಿಕ್ಷಕನೂ ಕಲಿಸಿಕೊಡುತ್ತಾನೆ.......

ಜೀವನ ಎಂಬುದು ಸಮುದ್ರದಂತೆ ,
ಯಾವಾಗ ಜೋರಾದ ಅಲೆ ಬರುತ್ತದೆ ,
ಯಾವಾಗ ಸುನಾಮಿ ಬರುತ್ತದೆ ,
ಅಂತ ಯಾರಿಗೂ ಗೊತ್ತಾಗೋದಿಲ್ಲ ,
ಹಾಗಾಗಿ ನಾವುಗಳು ಎಲ್ಲದಕ್ಕೂ ತಯಾರಾಗಿರಬೇಕು.......

ಜೀವನ ಎಂಬ ಸುಂದರ ಪಯಣ ,
ಕನಸ್ಸುಗಳ ಹೊತ್ತ ಮನಸ್ಸಿನ ಪಯಣ ,
ಬೇವು ಬೆಲ್ಲಗಳ ಸವಿಯಾದ ಮಿಶ್ರಣ ,
ಇವು ನಮ್ಮ ಬಾಳಿಗೆ ಸುಂದರ ಕ್ಷಣ.........

ಚಲಿಸುವ ಮೋಡಗಳ ಮರೆಯಲ್ಲಿ ನಾನು ನಿಮ್ಮನ್ನು ಕಂಡೆ ,
ಹೊಳೆಯುವ ನಿಮ್ಮನ್ನು ಕಂಡು ಬೆಳ್ಳಿ ಬಟ್ಟಲೆಂದು ಕೊಂಡೆ ,
ನಿಮ್ಮ ತುಟಿಯಲ್ಲಿ ಮಿನುಗುವ ಸುಂದರವಾದ ಮಿಂಚ ಕಂಡೆ ,
ನಿಮ್ಮ ಮುಗ್ಧ ನಗುವಲ್ಲಡಗಿದ ಮಾಯಾಶಕ್ತಿಯ ಕಂಡೆ ,
ಆ ನಗು ಎಲ್ಲರನ್ನು ಆಕರ್ಷಿಸುವ ರೀತಿ ಕಂಡೆ ,
ನಿಮ್ಮನ್ನು ಪೂರ್ಣ ಚಂದಿರ ಎಂದುಕೊಂಡೆ ,
ಆ ಚಂದಿರನಲ್ಲಿ ಅಮಾವಾಸ್ಯೆಯ ಕಲೆಯ ಕಂಡೆ ,
ಆದರೆ ನಿಮ್ಮಲ್ಲಿ ನಾನು ನಿಷ್ಕ ನಿಷ್ಕಲ್ಮಷ ಪ್ರೀತಿಯ ಕಂಡೆ..........

**ತಾರಾ ಹೆಚ್,ಎಸ್**
**6 ನೇ ಸೆಮಿಸ್ಟರ್ 5 ವರ್ಷದ ಬಿ.ಎ. ಎಲ್.ಎಲ್.ಬಿ**

# ಸ್ನೇಹ–ಬಂಧನ

ಬಯಸದೆ ಬಂದ ಗೆಳೆತನ,
ಕೇಳದೆ ಎಂದೂ ಸಿರಿತನ,
ಕಾಣದು ಎಂದು ಬಡತನ,
ಮುಗಿಯದು ಎಂದು ಈ ಸ್ನೇಹ–ಬಂಧನ

ಹುಟ್ಟಿ ಸಾಯೋದು ಮನುಷ್ಯ !
ಹುಟ್ಟಿ ಸಾಯದವನು ದೇವರು !
ಬೇರೆಯವರನ್ನು ಸಾಯಿಸೋದು ಪ್ರೀತಿ !
ಆದರೆ ಸಾಯೋರನ್ನು ಕೂಡ ಕೈಹಿಡಿದು
ಬದುಕಿಸುವುದು ಸ್ನೇಹ

ಮುಖನೋಡಿ ಬರುವ ಸ್ನೇಹ
ಸುಖ ಕೊಡಲ್ಲ !
ಹಣ ನೋಡಿ ಬರುವ ಸ್ನೇಹ ಗುಣ ಕೊಡಲ್ಲ,
ಆದರೆ ಮನಸ್ಸು ನೋಡಿ ಬರುವ ಸ್ನೇಹ
ಮನಸ್ಸಿನಿಂದ ದೂರ ಹೋಗಲ್ಲ



**ತಾರಾ ಹೆಚ್.ಎಸ್**
**6 ನೇ ಸೆಮಿಸ್ಟರ್ 5 ವರ್ಷದ ಬಿ.ಎ. ಎಲ್.ಎಲ್.ಬಿ**

# ತಾಯಿಯೇ ದೇವರು

ಜನ್ಮ ಕೊಟ್ಟವಳು ತಾಯಿ ದೇವರಂತೆ
ಪ್ರೀತಿ ಕೊಟ್ಟವಳು ತಾಯಿ ಕಾಮಧೇನುವಿನಂತೆ
ಶಕ್ತಿ ಕೊಟ್ಟವಳು ತಾಯಿ ಸೂರ್ಯನಂತೆ

ಮುಂಜಾನೆ ದೇವರ ನಾಮ ಹಾಡುಗಳು ಸೂರ್ಯನು ನೋಡುವಂತೆ
ರಾತ್ರಿಯಲ್ಲಿ ಲಾಲಿ ಹಾಡುಗಳು ಚಂದ್ರನು ನಾಚುವಂತೆ
ಹಾಡುವಳು ನನ್ನ ತಾಯಿ ಎಲ್ಲರೂ ನನ್ನ ಮೆಚ್ಚುವಂತೆ

ಮೊದಲು ಗುರುವಾಗಿ ವಿದ್ಯಾ ಮಾರ್ಗ ಕಲಿಸಿದಳು ವಶಿಷ್ಠರಂತೆ
ತಪ್ಪು ಮಾಡಿದಾಗ ಒಳ್ಳೆಯಮಾರ್ಗ ಕಲಿಸಿದಳು ದ್ರೋಣರಂತೆ
ಜೀವನ ಚಕ್ರದಲ್ಲಿ ಬಾಳುವ ಮಾರ್ಗವನ್ನು ಕಲಿಸಿದಳು ಮಹಾತ್ಮರಂತೆ

ಸರಳವಾಗಿ ಬಾಳು ಗಾಂಧಿಯಂತೆ ಎನ್ನುವಳು
ಸಾಧನೆ ಮಾಡಿ ಬಾಳು ಕಲಾಂನಂತೆ ಎನ್ನುವಳು
ದೇಶಕ್ಕಾಗಿ ಬಾಳು ಭಗತ್ ಸಿಂಗ್ ನಂತೆ ಎನ್ನುವಳು
ನನ್ನ ತಾಯಿ...



**ಲೋಕೇಶ್ ಮಹಾಂತ**
**4 ನೇ ಸೆಮಿಸ್ಟರ್ 3 ವರ್ಷದ ಎಲ್.ಎಲ್.ಬಿ**

## LEGAL PROFESSION: A NOBLE PROFESSION –AN OVERVIEW

**Legal Profession:**

Legal profession is the profession of practicing of law. It is the very oldest profession. This profession has always been regarded as a very noble profession and it is a profession of great honor. It is a service oriented profession. It is a fact that there is no such profession as this profession which touches various aspects of human life. In the administration of justice the legal profession is a partner with judiciary.

A person who is practicing the law is called an Advocate. An Advocate has to practice the profession in the spirit and veracity of honesty and not in the spirit of money earning. An Advocate is considered as a social engineer who brings about the social change and development in the society.

This is the only profession where the true practitioners are glorified with the title "Learned" which indicates possession of skills not only in law but also in the other areas and also indicates broad knowledge in all the fields.

The Indian legal profession is one of the largest and greatest in the world. In India Mahathma Gandhiji, Dr. B.R.Ambedkar, Sardar Vallabhbhai Patel etc., who contributed much to the independence of our Nation are learned persons in law and were the main cause for the attainment of independence and progress of country.

**The Object of Legal Profession:-**

The under laying essence of legal profession is to serve the society and protect the citizens from social evils. The main object of legal profession is to uphold Indian Constitution and to save the moral sanctity that regulates the Indian society. The duty of an Advocate is to protect and uphold the law. Therefore the legal profession is regarded as a noble profession.

**Justice Iyer's view on Legal Profession:-**

Justice Iyer calls the legal profession "the most brilliant and attractive of all professions with responsibilities both inside and outside it". Justice Iyer says "an advocate has to deal with greatest possible variety of human relations and has his mettle constantly tried from every direction. For the same reason an advocate earns great social distinction, which ought not to misuse at any cost".

**Supreme Court on Practicing of Law:-**

The legal profession always was considered a noble profession. This was recognized in many supreme court judgments such as Indian Council of Legal Aid and Advice v. Bar Council of India (1995 1 SCC 732) where the Supreme Court clearly said that the duties of lawyer is to assist the court in the administration of justice, the practice of law has a public utility flavor and therefore, he must strictly and scrupulously abide by the Code of Conduct behaving the noble profession. The noble profession is nothing without its ideals and ethics. The client- advocate relationship is fiduciary in nature and hence the lawyers have the duty of care.

**Legal profession is regulated by Advocates Act, 1961:-**

The Advocates Act, 1961 amended and consolidated the law relating legal practitioners and provided for the constitution of the State Bar Councils and All-India Bar – the Bar Council of India as its apex body. Some main functions of the Bar Council of India are as follows:-

1) To lay down standards of professional conduct and etiquette for advocates.

2) To promote and support law reform.

3) To promote legal education and lay down standards of such education in consultation with the Universities in India imparting such education and the State Bar Councils.

4) To lay down the procedure to be followed by its disciplinary committee and the disciplinary committee of each State Bar Councils.

5) To organize legal aid to the poor in prescribed manner.

6) To recognize on a reciprocal basis foreign qualifications in law obtained outside India for the purpose of admission as an advocate in India.

An advocate shall all times comfort himself in a manner befitting his status as an officer of court, a privileged member of community and a gentleman. An advocate shall fearlessly uphold the interests of his clients. Thus the legal profession is regarded as a noble profession.



**-A. KALAM HUSSAIN KHAN,**
6TH SEMESTER,
B.A., LL.B., 5 YEARS

# ಲೇಖನ–ಕರುಣೆಯಿಲ್ಲದ ಮಾನವರೇ, ಮೂಕ ಪ್ರಾಣಿಗಳ ಗುಣ ನಿಮಗುಂಟೇ? ಅವುಗಳ ವೇದನೆಗೆ ದನಿಯಾಗಲು ನಿಮಗೆ ಸಾಧ್ಯವೇ?

ಈ ಭೂಮಿಯಲ್ಲಿ ಪ್ರತಿಕ್ಷಣಕ್ಕೂ ಬದಲಾಗುವ ಮನುಷ್ಯರ ಮಧ್ಯೆ ಬದಲಾಗದೇ ಉಳಿದಿರುವುದು ಮಾತ್ರ ಮೂಕ ಪ್ರಾಣಿಗಳ ಪ್ರೀತಿ.ಸ್ವಾರ್ಥ,ಅಸೂಯೆ,ಹಿಂಸಾಚಾರ,ದ್ವೇಷ ತುಂಬಿದ ಸಮಾಜದಲ್ಲಿ ಪ್ರಾಂಜಲವಾದ,ನಿಸ್ವಾರ್ಥ ಪ್ರೀತಿ ಜೀವ–ಜಂತುವಿನದ್ದು.ಮಾನವರು ಎಷ್ಟೇ ಹಿಂಸಿಸಿದರೂ ತನ್ನ ನಿಯತ್ತನ್ನು ಬಿಡದೆ,ಕರುಣೆ ತುಂಬಿದ ಪ್ರೀತಿಯನ್ನು ತೋರುವ ಮೂಕಜೀವಿಗಳು.ಆಹಾರಕ್ಕಾಗಿ ಹೋರಾಡುತ್ತವೆಯೇ ಹೊರತು ಮಾನವರಂತೆ ಶ್ರೀಮಂತರಾಗಲಿಕ್ಕಲ್ಲ.

ಮೂಕ ಪ್ರಾಣಿಗಳು ತಮಗೆ ಸಿಕ್ಕ ಆಹಾರವನ್ನು ಹಂಚಿ ತಿನ್ನುತ್ತವೆ.ಅವುಗಳು ಸಹಬಾಳ್ವೆಯಿಂದ ಬಾಳುವುದನ್ನು ಮನುಷ್ಯರು ನೋಡಿ ಕಲಿಯಬೇಕು.ಮನುಷ್ಯರು ತಮ್ಮ ಅತಿಯಾಸೆಗೆ ಮನುಷ್ಯರನ್ನಷ್ಟೇ ಅಲ್ಲದೆ ಏನೂ ಅರಿಯದ ಮುಗ್ಧ ಪ್ರಾಣಿಗಳ ಜೀವಕ್ಕೆ ಹಾನಿಯುಂಟು ಮಾಡುತ್ತಿರುವ ಮಾನವರ ಮನುಷ್ಯತ್ವ ಎಲ್ಲಿಹೋಗಿದೆ?

ಮನುಷ್ಯರ ಆರೋಗ್ಯ ಸ್ವಲ್ಪ ಏರುಪೇರಾದರೆ ಸಾಕು ಚಿಕಿತ್ಸೆಗಾಗಿ ಆಸ್ಪತ್ರೆಗಳು! ನೊಂದ ಜನರಿಗೆ ನ್ಯಾಯ ಒದಗಿಸಲು ನ್ಯಾಯಾಲಯಗಳು! ವಾಸಿಸಲು ದೊಡ್ಡದೊಡ್ಡ ಅಂತಸ್ತಿನ ಕಟ್ಟಡಗಳು! ಊಟ ಮಾಡಲು ಮನೆಗಳಷ್ಟೇ ಅಲ್ಲದೇ ಹೋಟೆಲುಗಳು! ಅಬ್ಬಬ್ಬಾ!

ಮಾನವರೇ! ಮೂಕ ಜೀವಿಗಳು ರಸ್ತೆಯಲ್ಲಿ ಅನಾರೋಗ್ಯದಿಂದ ಬಳಲುತ್ತಿರುವಾಗ,ಅವುಗಳಿಗೆ ಎಂದಾದರು ಚಿಕಿತ್ಸೆಯನ್ನು ಕೊಡಿಸಲು ಕರೆದೊಯ್ದಿದ್ದೀರಾ? ಅವುಗಳು ತಮಗಾಗುತ್ತಿರುವ ಹಿಂಸೆ,ಅನ್ಯಾಯದ ಕುರಿತು ಯಾವ ರೀತಿ ಮತ್ತು ಯಾರನ್ನು ನ್ಯಾಯ ಕೇಳಬೇಕು? ಅವುಗಳು ಜೀವಿಸಲು ಬೀದಿಗಳಷ್ಟೇ ಸೀಮಿತವಾ? ಅವುಗಳಿಗಿರುವ ಆಹಾರದ ಕೊರತೆಯನ್ನು ಯಾರು ನೀಗಿಸುತ್ತಾರೆ?

ನಿಮ್ಮ ಸ್ವಾರ್ಥಗಳಿಗಾಗಿ ಕಾಡನ್ನು, ಕೆರೆ–ನದಿಗಳನ್ನು ನಾಶಮಾಡುತ್ತಿರುವ ನಿಮಗೆ ಮೂಕ ಪ್ರಾಣಿಗಳ ವೇದನೆ ಕಾಣಿಸುತ್ತಿಲ್ಲವೇ? ಎಷ್ಟೋ ಜೀವಿಗಳು ರಸ್ತೆ ಅಪಘಾತಗಳಿಗೊಳಗಾಗಿ ಸಾವಿಗೀಡಾಗಿರುವ ಕಲ್ಪನೆಯಾದರೂ ನಿಮಗಿದೆಯೇ? ರಸ್ತೆ ಬದಿಗಳಲ್ಲಿ ಇರುವ ಮೂಕ ಜೀವಿಗಳಿಗೆ ಆಹಾರ ನೀಡಿದರೆ ನಿಮಗೆ ಏನಾದರೂ ನಷ್ಟವಾದೀತೇ? ರೋಗದಿಂದ ಬಳಲುತ್ತಿರುವ ಪ್ರಾಣಿಗಳನ್ನು ನೋಡಿ ನೀವು ಎಂದಾದರು ಮರುಗಿರುವೆಯಾ? ಅವುಗಳ ಬಾಲಕ್ಕೆ,ಬಾಯಿಗೆ ಪಟಾಕಿ ಇಟ್ಟು ಸಿಡಿಸುವುದರಿಂದ ನಿನಗಾಗುವ ಲಾಭವೇನು? ನಿಮ್ಮ ಸ್ವಾರ್ಥಕ್ಕಾಗಿ,ಸಂತೋಷಕ್ಕಾಗಿ ಮೂಕ ಜೀವಿಗಳಿಗೆ ಹಿಂಸೆ ನೀಡಿ,ಮನಬಂದಂತೆ ಬಳಸಿಕೊಂಡು ಶೋಷಿಸುವುದು ಅಮಾನವೀಯ ಕೃತ್ಯವಲ್ಲವೇ? ಮಾನವರೇ! ಎಲ್ಲಿ ಹೋಗಿದೆ ಆ ನಿಮ್ಮ ಮಾನವತತ್ವ?

ಈ ಭೂಮಿಯು ಕೇವಲ ಮಾನವರಿಗಾಗಿ ಸೃಷ್ಟಿಯಾದುದಲ್ಲ, ಸಕಲ ಜೀವರಾಶಿಗಳಿಗೂ ವಾಸಿಸುವ ಹಕ್ಕಿದೆ. ವಾಟ್ಸ್‌ಆಪ್, ಫೇಸ್ಬುಕ್, ಇನ್ಸ್ಟಾಗ್ರಾಮ್ಗಳಂತಹ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಾಣಿಗಳ ಜೊತೆ ಫೋಟೋ , ವೀಡಿಯೊ ಹಾಕುವುದು ಪ್ರೀತಿಯಲ್ಲ. ಅವುಗಳ ಕಷ್ಟಕ್ಕೆ ಸ್ಪಂದಿಸುವುದು ನಿಜವಾದ ಪ್ರೀತಿ.ಪಶುವೈದ್ಯರುಗಳಿಂದ ಮೂಕ ಪ್ರಾಣಿಗಳಿಗೆ ಬೇಕಾಗಿರುವ ಚಿಕಿತ್ಸೆಯನ್ನು ಕೊಡಿಸಬೇಕು. ಅವುಗಳಿಗೆ ಪರಿಶುದ್ಧ ಆಹಾರವನ್ನು ಒದಗಿಸಬೇಕು. ಆ ಮೂಕ ಜೀವಿಗಳು ನ್ಯಾಯ ಕೇಳಲು ಕೋರ್ಟು,ಪೋಲೀಸ್ ಸ್ಟೇಷನ್ಗೆ ಹೋಗಲು ಸಾಧ್ಯವಿಲ್ಲ.ಆಸ್ಪತ್ರೆ,ಹೋಟೆಲುಗಳಿಗೆ ಹೋಗಲಾರದಷ್ಟು ಅಸಹಾಯಕತೆ ಅವುಗಳದ್ದು.

ಪ್ರಾಣಿಗಳಿಗಿರುವ ಹಕ್ಕುಗಳ ಬಗ್ಗೆ ಸಮಾಜದಲ್ಲಿರುವ ಪ್ರತಿಯೊಬ್ಬರೂ ತಿಳಿದುಕೊಳ್ಳಿ.ನಮ್ಮ ಸಂವಿಧಾನವು ಪ್ರಾಣಿಗಳಿಗೂ ಸಹ ಅದರದ್ದೇ ಆದ ಹಕ್ಕುಗಳನ್ನು ನೀಡಿದೆ.

"ಅನುಚ್ಛೇದ 51'ಎ' ಪ್ರಕಾರ ಎಲ್ಲಾ ಜೀವಿಗಳನ್ನು ಪ್ರೀತಿಯಿಂದ ಕಾಣಬೇಕಾಗಿರುವುದು ಭಾರತೀಯರ ಮೂಲಭೂತ ಕರ್ತವ್ಯವಾಗಿದೆ." ಇದೇ ರೀತಿ ಇನ್ನೂ ಅನೇಕ ಕಾನೂನುಗಳಿವೆ.

ಪ್ರಾಣಿಗಳಿಗಿರುವ ಹಕ್ಕುಗಳ ಬಗ್ಗೆ ತಿಳಿದುಕೊಂಡು,ಅವುಗಳಿಗೆ ಹಾನಿಯಾಗದಂತೆ, ನಿಮ್ಮಂತೆಯೇ ಅವುಗಳಿಗೂ ಜೀವಿಸುವ ಹಕ್ಕಿದೆ ಎಂಬದನ್ನು ಮನದಲ್ಲಿಟ್ಟುಕೊಂಡು ಜೀವಿಸಬೇಕು.



**ಸೋನಾ ಹೊನ್ನ ಪಟೇಲ್.ಎ.ಎಸ್**
**2ನೇ ಸೆಮಿಸ್ಟರ್, ಐದು ವರ್ಷ**
ಬಿಎ. ಎಲ್.ಎಲ್.ಬಿ ವಿದ್ಯೋದಯ ಕಾನೂನು ಕಾಲೇಜು

# ಯಾರಿವರು ????

ಯಾವ ಜನಾಂಗವನ್ನು, ಯಾವ ಪಂಗಡವನ್ನು, ಯಾವ ಮನೆಯನ್ನು, ಯಾವ ಮನೆತನವನ್ನು ಇಡೀ ಭಾರತ ದೇಶದ ಜನತೆ ದೂರವಿಟ್ಟಿತ್ತೋ, ಅವರ ನೆರಳು ಸೋಕಿದರೂ ಮೈಲಿಗೆ ಎಂಬ ಹೀನ ಪದ್ಧತಿಯನ್ನು ಪಾಲಿಸುತ್ತಿತ್ತೋ... ಅದೇ ಜನಾಂಗದ, ಅದೇ ಮನೆಯ.. ಸಾಮಾನ್ಯ ಅಲ್ಲ.. ಅಲ್ಲ.. ಅಸಾಮಾನ್ಯ ವ್ಯಕ್ತಿ ರೂಪಿಸಿರುವ ನಿಯಮ ನಿಬಂಧನೆಗಳನ್ನು, ಸಮಾನತೆಯ ಪದ್ಧತಿಯನ್ನು, ಇಂದು ಇಡೀ ಭಾರತ ದೇಶವೇ ಪಾಲಿಸುತ್ತಿದೆ, ಆತ ಹಾಕಿರುವ ಕಾನೂನಿನ ಅಡಿಪಾಯದ ಮೇಲೆ ಭಾರತ ದೇಶದ ವ್ಯವಸ್ಥೆಯೇ ನಿಂತಿದೆ, ಆತ ನಿರ್ಮಿಸಿರುವ ದಾರಿಯಲ್ಲಿ ದೇಶ ಸಾಗುತ್ತಿದೆ.

ಅಂದು ಈತನಿಗೆ "ಅಲ್ಲಿಗೆ ಹೋಗಬೇಡ", "ಇಲ್ಲಿಗೆ ಹೋಗಬೇಡ", "ಈ ದಾರಿಯಲ್ಲಿ ಬರಬೇಡ", ಎಂದು ಹೇಳುತ್ತಿದ್ದ ಜನರು... ಇಂದು ಈತ ಹೇಳಿದ, ತೋರಿಸಿದ ದಾರಿಯಲ್ಲಿ ನಡೆಯುತ್ತಿದ್ದಾರೆ.

ಇವೆಲ್ಲಕ್ಕಿಂತ ಹೆಚ್ಚೆಂದರೆ, ಯಾವ ಜನರ ಮನೆಯೊಳಗೆ ಆತನ ಪ್ರವೇಶ ನಿರ್ಬಂದಿಸಿತ್ತೋ ಅದೇ ಜನರ ಮನೆಯ ನಡುಮನೆಯಲ್ಲೇ ಇಂದು ವಿರಾಜಮಾನವಾಗಿ ಪ್ರತೀ ವಾರ ಬರುತ್ತಿದ್ದಾನೆ, ಅವರದ್ದೇ ಮಕ್ಕಳ ಪುಸ್ತಕದಲ್ಲಿನ ಪಾಠವಾಗಿದ್ದಾನೆ, ದೇಶದ ಜನತೆ ಇಡುತ್ತಿರುವ ಪ್ರತಿಯೊಂದು ಅಡಿಗೂ ದಿಕ್ಸೂಚಿಯಾಗಿದ್ದಾನೆ.

"ಚಪ್ಪಲಿ ಹೊಲಿಯುವವರ ಮಗನೂ ಸಹ ಚಪ್ಪಲಿ ಹೊಲಿಯುವ ಕಾಯಕವನ್ನೇ ಮಾಡಬೇಕು, ಕುಂಬಾರನ ಮಗನೂ ಕುಂಬಾರನೇ ಆಗಬೇಕು" ಎಂಬ ನಿಯಮಗಳನ್ನು ಕಿತ್ತೆಸೆದವನು ಈತ.ನ್ಯಾಯಾಲಯದ ಹೊರಗೆ ಕೂತು ಚಪ್ಪಲಿ ಹೊಲಿಂ ಯುವ ತಂದೆಯೂ ಕೂಡ, ತನ್ನ ಮಗ ನ್ಯಾಯಾಧೀಶನಾಗಬಹುದು ಎಂಬ ಕನಸು ಕಾಣುವ ಸ್ವಾತಂತ್ರ್ಯ ತಂದು ಕೊಟ್ಟವನು ಈತ. ಚಹಾ ಮಾಡುವ ಹುಡುಗನೂ ಸಹ ಪ್ರಧಾನಮಂತ್ರಿಯ ಹುದ್ದೆಯನ್ನು ಅಲಂಕರಿಸಲು ಅರ್ಹರು ಎಂದು ತೋರಿಸಿಕೊಟ್ಟ ಪ್ರಜಾಪ್ರಭುತ್ವದ ಸೃಷ್ಟಿಕರ್ತ ಈತ, ಹೂ ಮಾರುವವರ ಮಗಳೂ ಸಹ ಖಂಖ ಅಧಿಕಾರಿ ಆಗಬಹುದು ಎಂದು ಹೇಳುವ ಸಂವಿಧಾನವನ್ನು ರಚಿಸಿದ ಪ್ರಮುಖ ವ್ಯಕ್ತಿ ಈತ. "ನಮ್ಮ ಮೇಲ್ವರ್ಗದ ಜಾತಿಯೇ ಶ್ರೇಷ್ಠ" ಎಂಬ ಭ್ರಮೆಯಲ್ಲಿದ್ದ ಮೇಲ್ಜಾತಿ ಜನರ ಮಕ್ಕಳ ಖಔಐಇ ಒಔಆಇಐ ಈತ, ದೇವರ ಮುಂದೆ ಮಂತ್ರ ಪಠಿಸುವ ಬಾಯಲ್ಲಿ "ಜೈ ಭೀಮರಾವ್" ಎಂದು ಬರುತ್ತಿದೆ, ಮನೆಯಲ್ಲಿ ಕಸ ಪೊರಕೆ ಹಿಡಿಯುವ ಹೆಣ್ಣು ಮಕ್ಕಳ ಕೈಯಲ್ಲಿ ಪುಸ್ತಕ–ಪೆನ್ನು ಬಂದಿದೆ, ಕೆಲವೇ ಕೆಲವು ವರ್ಗದವರಿಂದ ತುಂಬಿಹೋಗಿದ್ದ ದೇವಾಲಯಗಳು ಇಂದು ಸರ್ವ ಧರ್ಮ ಸಮತೆಯಿಂದ ತುಂಬಿದೆ, ಇಂದು ಯಾವುದೇ ಖಾನಾವಳಿಯಲ್ಲಿ ಯಾವುದೇ ವರ್ಗದ ಜನರು ಊಟ ಮಾಡಬಹುದು ಎಂದರೆ ಅದಕ್ಕೆ ಈತನೇ ಕಾರಣ, ಯಾರು ಈತ? ಯಾರು ಈತ?? ಅವರೇ ಡಾ. ಬಿ. ಆರ್. ಅಂಬೇಡ್ಕರ್, ಇಂತಹ ಮಹಾನ್ ವ್ಯಕ್ತಿಯನ್ನು ಪಡೆದ ಭಾರತ ದೇಶವೇ ಧನ್ಯ ಎಂಬುದು ನನ್ನ ಭಾವನೆ, ಒಂದು ದೇಶವು ಒಳ್ಳೆಯ ದೇಶವೆಂದು ಗುರುತಿಸಲ್ಪಡಬೇಕು ಎಂದರೆ ಅದು ಕೇವಲ ಆ ದೇಶದ ಜನರ ಸದ್ಗುಣಗಳಿಂದ, ಸನ್ನಡತೆಯಿಂದ, ಸಮಾನತೆಯ ಭಾವದಿಂದ ಮಾತ್ರ ಸಾಧ್ಯ, ಇಂತಹ ಮಹಾನ್ ವ್ಯಕ್ತಿಯ ಜನ್ಮದಿನದಂದಾದರೂ ನಾವು ಅವರಿಗೆ ಕೃತಜ್ಞರಾಗಿರೋಣ, ಈ ಲೇಖನವನ್ನು ರಾತ್ರಿಯ ವೇಳೆ ಪ್ರಕಟಿಸುತ್ತಿರುವ ಕಾರಣ, ಈ ದಿನದ ನಮ್ಮ ಕೊನೆಯ ಕೃತಜ್ಞತೆ ಅವರ ಹೆಸರಿನಲ್ಲಿರಲ್ಲಿ ಎಂದು

**ಪುರುಷೋತ್ತಮ್ ಟಿ.ಆರ್.**
**2ನೇ ಸೆಮಿಸ್ಟರ್, 3 ವರ್ಷ ಎಲ್.ಎಲ್.ಬಿ**



# ಶಿಕ್ಷಣದಿಂದ ವಂಚಿತರಾದ ವಲಸೆ ಕಟ್ಟಡ ಕಾರ್ಮಿಕರ ಮಕ್ಕಳು

ಹೌದು, ನಮ್ಮ ಸರ್ಕಾರವು ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆಯನ್ನು ಜಾರಿಗೆ ತಂದಿದೆ. ಎಲ್ಲಾ ಮಕ್ಕಳು ಒಳ್ಳೆಯ ಶಿಕ್ಷಣ ಪಡೆಯಲಿ ಮತ್ತು ಭಾರತದ ಒಳ್ಳೆಯ ಪ್ರಜೆಯಾಗಲು ಎಂದು ಹಲವಾರು ರೀತಿಯ ಯೋಜನೆಗಳನ್ನು ಶಿಕ್ಷಣ ಎನ್ನುವ ವರ್ಗಕ್ಕೆ ತಂದಿದ್ದಾರೆ. ಆದರೆ ಆ ಕಾಯ್ದೆಯು ವಲಸೆಹೋಗುವ ಕಟ್ಟಡ ಕಾರ್ಮಿಕರ ಮಕ್ಕಳಿಗಂತೂ ಮರೀಚಿಕೆಯಾಗಿ ಉಳಿದಿದೆ. ಒಂದು ಹೊತ್ತಿನ ಹಸಿವನ್ನು ನೀಗಿಸಲು ಕಾರ್ಮಿಕರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು ಮತ್ತು ಅವರ ಜೊತೆಯವರ ಕುಟುಂಬಸ್ಥರನ್ನು ಮತ್ತು ಸಣ್ಣ ಸಣ್ಣ ಮಕ್ಕಳನ್ನು ಕರೆದುಕೊಂಡು ಹೋಗುವುದು ಸರ್ವೇಸಾಮಾನ್ಯವಾಗಿದೆ. ಉದಾಹರಣೆಗೆ ಈರುಳ್ಳಿ ಕಡಲೆ ಹೊಲಗಳಲ್ಲಿ ಕಬ್ಬು ಕಟಾವು ಮಾಡಲು ಕೂಲಿ ಕೆಲಸಕ್ಕಾಗಿ ವಲಸೆ ಹೋಗುವ ಕಾರ್ಮಿಕರು ತಮ್ಮ ಕುಟುಂಬಸ್ಥರನ್ನು ಜೊತೆಗೆ ಕರೆದುಕೊಂಡು ಹೋಗುತ್ತಾರೆ. ಮತ್ತು ವರ್ಷದಲ್ಲಿ ಮೂರ್ನಾಲ್ಕು ತಿಂಗಳು ಅದೇ ಪ್ರದೇಶದಲ್ಲಿ ಗುಡಿಸಲನ್ನು ಕಟ್ಟಿ ತಂಗುವಂತ ಸಮಯ ಬರುತ್ತದೆ. ಅದೇ ಕಾರಣ ಅವರು ಅವರ ಮಕ್ಕಳನ್ನು ಅವರ ಜೊತೆ ಕರೆ ತರುವುದು ಅನಿವಾರ್ಯ. ಹೀಗೆ ಮಕ್ಕಳನ್ನು ಗುಡಿಸಲು ಬಳಿ ಬಿಟ್ಟು ಕೆಲಸಕ್ಕೆ ತೆರಳುವುದು ಅನಿವಾರ್ಯ ಸಂಗತಿಯಾಗಿದೆ. ಹೀಗೆ ಮಂಡ್ಯ ಜಿಲ್ಲೆಯಲ್ಲಿ ಡಿಸೆಂಬರ್2, 2021 ರಂದು 11:10 ಬೆಳಗ್ಗೆ ತಂದೆ ತಾಯಿ ಕೂಲಿ ಕೆಲಸಕ್ಕೆ ಹೋಗಿರುವ ಸಂದರ್ಭದಲ್ಲಿ 12 ವರ್ಷದ ಯುವತಿಯನ್ನು ಅತ್ಯಾಚಾರ ಮಾಡಿ ಹತ್ಯೆ ಮಾಡಿರುತ್ತಾನೆ. ಈ ಸುದ್ದಿಯು ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಮತ್ತು ಕಟ್ಟಡ ಕೆಲಸಕ್ಕೆ ಜೊತೆಗೆ ಮಕ್ಕಳನ್ನು ಕರೆದುಕೊಂಡು ಹೋಗಿದ್ದಾಗ ಅವರು ಕೂಲಿ ಕೆಲಸದಲ್ಲಿ ನಿರತರಾಗಿರುವಾಗ ಚಿಕ್ಕ ಮಕ್ಕಳು ಮಣ್ಣಿನಲ್ಲಿ ಬಿಸಿಲಿನಲ್ಲಿ ಊಟವಿಲ್ಲದೆ ಹಸಿವಿನಿಂದ ಆಟವಾಡುತ್ತಾ ಕಾಲಕಳೆಯುತ್ತಾರೆ. ಎಂಟರಿಂದ ಹತ್ತು ವರ್ಷದ ಮಕ್ಕಳಿಗೆ ಸಣ್ಣಪುಟ್ಟ ಕೆಲಸಗಳನ್ನು ಅಂದರೆ ಕಟ್ಟಡ ಕಾಮಗಾರಿ ನಿರ್ವಹಿಸುವ ಸ್ಥಳದಲ್ಲಿ ಕ್ಯೂರಿಂಗ್ ಮಾಡಲು ಮತ್ತು ಡ್ರಮ್ ಗಳಲ್ಲಿ ನೀರು ತುಂಬಿಸಲು , ಇಟ್ಟಿಗೆಗಳನ್ನು ಜೋಡಿಸಲು ಹೀಗೆ ಸಣ್ಣಪುಟ್ಟ ಕೆಲಸಗಳಿಗಾಗಿ ಮಕ್ಕಳನ್ನು ನೇಮಿಸಿರುತ್ತಾರೆ. ಮತ್ತು ಆ ಮಕ್ಕಳ ಬಾಲ್ಯವೆಲ್ಲ ಬೀದಿಬದಿಯಲ್ಲಿ ನೀರಿಲ್ಲದೆ, ಪೌಷ್ಟಿಕ ಆಹಾರವಿಲ್ಲದೆ, ಉತ್ತಮವಾದ ಲಾಲನೆ-ಪಾಲನೆ ವಿಲ್ಲದೆ ಕಮರುತ್ತಿದೆ. ಪುಟ್ಟ ಕಂದಮ್ಮಗಳಿಗೆ ಹಾಲಿಲ್ಲ ಅತ್ತರೆ ಸುಧಾರಿಸುವ ವರು ಯಾರು ಇರುವುದಿಲ್ಲ. ಮಕ್ಕಳೇ ಮಕ್ಕಳನ್ನು ಪಾಲಿಸುವ ಜವಾಬ್ದಾರಿ ಇಲ್ಲಿ ಅನಿವಾರ್ಯವಾಗಿದೆ. ಪುಸ್ತಕ ಪೆನ್ನನ್ನು ಹಿಡಿಯಬೇಕಾದ ಕೈಗಳಲ್ಲಿ ಇಟ್ಟಿಗೆಗಳನ್ನು ಹೊರುವ ಸಂದರ್ಭವಿದೆ.

" ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಎನ್ನುವ ವಾಕ್ಯದಲ್ಲಿ ಮುಂದಿನ ಉತ್ತಮ ಪ್ರಜೆಯಾಗಲು ಶಿಕ್ಷಣವು ಅತಿ ಅವಶ್ಯಕವಾದ ಅಂಶವಾಗಿದೆ. ನಮ್ಮ ಸರ್ಕಾರವು ಇಂತಹ ಮಕ್ಕಳಿಗಾಗಿ " ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ-2009" ತಂದಿದ್ದರೂ ಸಹ ವಲಸೆ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಕಾರಣ ಮೂರು ತಿಂಗಳು ಒಂದು ಪ್ರದೇಶದಲ್ಲಿ ಕೆಲಸ ಮಾಡಿದರೆ ಮತ್ತೊಂದು ಪ್ರದೇಶಕ್ಕೆ ಮತ್ತೆ ವಲಸೆ ಹೋಗುವ ಸಂದರ್ಭ ಬರುವುದು ಎಂಬ ಕಾರಣದಿಂದ ಕಾರ್ಮಿಕರು ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುತ್ತಾರೆ. ಹೀಗೆ ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ನಮ್ಮ ಸರ್ಕಾರವು ಸರ್ಕಾರಿ ಶಾಲೆಗಳಲ್ಲಿ 6ನೇ ತರಗತಿಯಿಂದ ಊಟ-ವಸತಿಯ ಶಿಕ್ಷಣವನ್ನು ನೀಡುತ್ತಿದ್ದಾರೆ. ಆದರೆ ಒಂದರಿಂದ ಐದನೇ ತರಗತಿಯ ಮಕ್ಕಳಿಗೆ ಊಟದ ಸೌಲಭ್ಯ ಮಾತ್ರವಿದ್ದು ವಸತಿ ಯ ಸೌಲಭ್ಯ ಇಲ್ಲದಿರುವ ಕಾರಣ ಅವರು ಶಿಕ್ಷಣವನ್ನು ಪಡೆಯಲು ಹಿಂದೆ ಉಳಿದಿದ್ದಾರೆ ಮತ್ತು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಒಂದನೇ ತರಗತಿಯಿಂದ ವಸತಿ ಶಿಕ್ಷಣವನ್ನು ನಮ್ಮ ಸರ್ಕಾರವು ಆರಂಭಿಸಿದರೆ ವಲಸೆಹೋಗುವ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಸಿಗುವುದರ ಜೊತೆಗೆ ಹೊಸ ಉದ್ಯೋಗಗಳು ಸೃಷ್ಟಿಯಾಗುವುದು. ಈ ರೀತಿಯಾಗಿ ನಮ್ಮ ಸರ್ಕಾರವು ವಲಸೆ ಕಟ್ಟಡ ಕಾರ್ಮಿಕರ ಶಿಕ್ಷಣದ ಬಗ್ಗೆ ಇನ್ನು ಹೆಚ್ಚಿನ ಕ್ರಮ ಕೈಗೊಂಡರೆ ಅಂತಹ ಮಕ್ಕಳು ಉನ್ನತ ಶಿಕ್ಷಣ ಪಡೆಯುವುದರ ಜೊತೆಗೆ ಮುಂದಿನ ಉತ್ತಮ ಪ್ರಜೆಯಾಗಿ ದೇಶದ ಅಭಿವೃದ್ಧಿಗಾಗಿ ದುಡಿಯುತ್ತಾರೆ.



**ಶ್ವೇತ ಮೇಘವತ್. ಆರ್**
**3 ವರ್ಷದ 2ನೇ ಸೆಮಿಸ್ಟರ್, ಎಲ್.ಎಲ್.ಬಿ**

# ರಾವಣ
# ನೀವು ಅರಿಯದ ರಹಸ್ಯಗಳು

ರಾವಣ, ರಾವಣ ಬ್ರಹ್ಮ,ಲಂಕಾದೀಶ ಮಹಾ ಬ್ರಾಹ್ಮಣ,ರಾಕ್ಷಸ ಕುಲ ತಿಲಕ, ಎಲ್ಲಾ ರಾವಣನಿಗೆ ಇರುವ ಹೆಸರುಗಳು, ಒಂದು ವೇಳೆ ರಾವಣ ಇಲ್ಲದಿದ್ದರೆ ರಾಮಾಯಣವೇ ನಡೆಯುತ್ತಿರಲಿಲ್ಲ. ರಾವಣ ಪರಶಿವನನ್ನೇ ಮೆಚ್ಚಿಸಿ ಆತ್ಮಲಿಂಗವನ್ನು ಪಡೆದುಕೊಂಡ ದೈವ ಭಕ್ತ, ಕುಬೇರನನ್ನು ಸೋಲಿಸಿ ಲಂಕೆಯನ್ನು ವಶ ಮಾಡಿಕೊಂಡ ಪರಾಕ್ರಮಿ.

ವೇದಗಳನ್ನು ಅಭ್ಯಾಸ ಸಿ ನಾಲಿಗೆ ತುದಿಯಲ್ಲಿ ವಿದ್ಯೆ ಅಧಿದೇವತೆಯನ್ನು ಪ್ರತಿಷ್ಠಾಪಿಸಿಕೊಂಡವನು. ಅವನನ್ನು ಅಪರಿಮಿತ ಶಿವಭಕ್ತನಾಗಿದ್ದನು, ಶಿವ ತಾಂಡವ ಸ್ತೋತ್ರವನ್ನು ರಚಿಸಿದವನು, ಪಾಂಡಿತ್ಯ ಹೇಗಿತ್ತು ಎಂದರೆ ಗ್ರಹಗಳನ್ನು ಶಸಿಸಾಬಲ್ಲ ಖಗೋಳ ವಿಜ್ಞಾನಿಯಾಗಿದ್ದ, ವೇದಗಳನ್ನು ಅವನು ಹರಿದು ಕುಡಿದಿದ್ದರಿಂದ ಬ್ರಹ್ಮನನ್ನೇ ಅವನ ಮನೆಯ ಪರೋಹಿತ್ಯಕ್ಕೆ ಕರೆಯುತ್ತಿದ್ದ, ಆಯುರ್ವೇದ ವೃಕ್ಷಶಾಸ್ತ್ರಗಳ ಸಂಬಂಧಿಸಿದ ಗ್ರಂಥವನ್ನು ರಚಿಸಿದವನು, ಇವತ್ತಿಗೂ ರಾವಣನ ವೃಕ್ಷಶಾಸ್ತ್ರ ಎಂದು ಕರೆಯಲ್ಪಡುತ್ತದೆ, ಅಥರ್ವಣ ವೇದ, ತಂತ್ರ ಶಾಸ್ತ್ರಗಳು ಅವನಿಗೆ ಕರಗತವಾಗಿತ್ತು ಅವನು ಎಷ್ಟು ಪ್ರಾಮಾಣಿಕವಾಗಿದ್ದ ಎಂದರೆ ಯಾವ ರಾಮನ ಜೊತೆ ಯುದ್ಧ ಮಾಡಬೇಕು ಅವನಿಗೆ ಅದ್ಭುತ ಮುಹೂರ್ತ ಯಾವುದೆಂದು ತಿಳಿಸಿ ಕೊಡುತ್ತಾನೆ,

ರಾಮನಿಗೂ ರಾವಣನ ಜ್ಞಾನದ ಮೇಲೆ ಎಷ್ಟು ನಂಬಿಕೆ ಇತ್ತು ಎಂದರೆ ಅವನು ಸಾಯುವಾಗ ಲಕ್ಷ್ಮಣನಿಗೆ ರಾವಣನಿಂದ ರಾಜ್ಯ ಆಡಳಿತ ಪಾಠವನ್ನು ಹೇಳಿಸಿಕೊಂಡು ಬರುವಂತೆ ಅಪ್ಪಣೆ ಮಾಡುತ್ತಾನೆ

ರಾವಣನು ಈ ಜಗತ್ತು ಕಂಡ ಅತ್ಯದ್ಭುತ ಆಡಳಿತಗಾರ,ಈ ರಾವಣನನ್ನು ದಶಕಂಠ ದಶಾನನ ದಶಗ್ರೀವ ಎಂದೆಲ್ಲ ಕರಿಯಲ್ಪಡುತ್ತಾರೆ ಕಾರಣ ಅವನಿಗೆ 10 ತೊಲೆಗಳು ಎಂದರೆ ಅವನಿಗೆ ಹತ್ತು ತಲೆಗಳಲ್ಲಿಇರುವ ಜ್ಞಾನ ಅವನಲ್ಲಿತ್ತು ಅವನು ಒಂದೇ ವಿಷಯವನ್ನು 10 ಬಾರಿ ಯೋಚಿಸಬಲ್ಲ ಆಲೋಚನೆಯಲ್ಲಿ ಶಕ್ತಿಯಲ್ಲಿ ದಶಕಂಠನಾಗಿದ್ದ ಇದಕ್ಕಾಗಿ ರಾವಣನ ದಶಕಂಠ ರಾವಣ ಎನ್ನುತ್ತಾರೆ.



ಯೋಗೀಶ್ ಬಿ.ಎನ್.
3 ವರ್ಷದ 3ನೇ ಸೆಮಿಸ್ಟರ್, ಎಲ್.ಎಲ್.ಬಿ

# ಕಾಲೇಜು ಜೀವನ

ಮೂರು ವರ್ಷಗಳ ಕಾಲ ನಡೆದ ಕ್ಲಾಸುಗಳು
ಕೆಲವು ಕ್ಲಾಸಿನಲ್ಲಿ ಮಾಡಿದ್ದ ಕೀಟಲೆಗಳು
ಬಿಡದೆ ಬರೆಯುವ ಅಸೈನ್ಮೆಂಟ್ ಗಳು
ಇಷ್ಟವಿದ್ದರೂ ಕಷ್ಟದ ಸೆಮಿನಾರ್ಗಳು
ಹಾಗೆ ಬಂದು ಹೋಗುವ ಗೆಳೆಯರು ಹುಟ್ಟು ಹಬ್ಬಗಳು
ಅವಶ್ಯಕತೆ ಇದ್ದಾಗ ಬಾರದ ಸ್ಕಾಲರ್ಶಿಪ್ ಗಳು
ಆರು ತಿಂಗಳಿಗೊಮ್ಮೆ ಬರುವ ಎಕ್ಸಾಮ್ ಗಳು
ಸ್ನೇಹಿತರೊಂದಿಗೆ ಮುನಿಸಿಕೊಂಡು ಕೆಲ ಸನ್ನಿವೇಶಗಳು
ಮರೆಯಲಾಗದ ಕಾಲೇಜು ಜೀವನ ಮುಗಿಯದ ಜೀವನ ಪಯಣ

# ಭಾವನಾತ್ಮಕ ಪ್ರೀತಿ

ಭಾವನೆಗಳು ಹೊರಬರದೆ ಮನದೊಳಗೆ ಉಳಿದಿರಲು ಅದುವೇ ನಿಜವಾದ ಪ್ರೀತಿ
ಭಾವನೆಗಳು ಹೊರಬಂದು ಮನದ ಭಾರ ಇಳಿದಿರಲು ಮರೆಯಾಗಿ ಹೋಗುವುದು ಪ್ರೀತಿ
ಬೆಲೆ ಇರುವುದು
ಮನದೊಳಗಿನ ಭಾವನೆಗಳ ಪ್ರೀತಿಗೆ
ಆ ಭಾವನೆ ತುಂಬಿದ
ಪ್ರೀತಿಯ ಮನದ ಮನೆಯ
ಕದವ ತಟ್ಟಿ ಹೊರ ಬಂದರೆ ಮರೆಯಾಗಿ ಹೋಗುವುದೇ ಈ ಪ್ರೀತಿ

# ಕರುಳಿನ ಕೂಗು

ನಿನ್ನನ್ನು ಪಡೆಯಲು ನಾನು ಸುತ್ತಿದ್ದ ದೇವಸ್ಥಾನಗಳೆಷ್ಟು
ಹೊತ್ತ ಅರೆಕೆಗಳೆಷ್ಟೋ
ಕಂಡ ಕನಸುಗಳೆಷ್ಟು

ನಿನ್ನ ಏರುವಾಗ ಪಟ್ಟ ಕಷ್ಟಗಳೆಷ್ಟು
ನಿನ್ನ ಹುಟ್ಟಿನಿಂದ ಪಟ್ಟ ಸಂತೋಷವೆಷ್ಟು

ಪುಟ್ಟ ಪುಟ್ಟ ಹೆಜ್ಜೆನಿಟ್ಟು ನೀ ನಡೆದಾಗ
ನೀ ಹಾಡಿ ನಲಿದು ಆಡುವಾಗ ಪಾಠ ಪ್ರವಚನಗಳು ಕಲಿತಾಗ
ನಮದೆಲ್ಲ ಸಂಭ್ರಮದ ರಾಗ ನಮ್ಮೆಲ್ಲಾ ಖುಷಿಯೇ ನೀನಾಗ..



**ಶುಭಲಕ್ಷ್ಮೀ ಕೆ.ವಿ.**
**2ನೇ ಸೆಮಿಸ್ಟರ್, 3ನೇ ವರ್ಷ, ಎಲ್.ಎಲ್.ಬಿ.**

# ಕಾನೂನು ಪದವಿ ಎಂಬುದು ಅತ್ಯಂತ ಶ್ರೇಷ್ಠ ಪದವಿ

ಪ್ರಾಚೀನ ಕಾಲದಿಂದಲೂ 'ನ್ಯಾಯ' ಎಂಬ ಪದಕ್ಕೆ ಅತ್ಯಂತ ಶ್ರೇಷ್ಠ ಸ್ಥಾನವಿದೆ, ನ್ಯಾಯವನ್ನು ನೀಡುವವರು ಸಮಾಜದಲ್ಲಿ ಅತ್ಯಂತ ಗೌರವಯುತ ವ್ಯಕ್ತಿಗಳಾಗಿದ್ದರು, ನಂತರದ ದಿನಗಳಲ್ಲಿ 'ನ್ಯಾಯಾಂಗ ವ್ಯವಸ್ಥೆ' ಅಸ್ತಿತ್ವಕ್ಕೆ ಬಂದಾಗಿನಿಂದ ನ್ಯಾಯಾಧೀಶರು, ವಕೀಲರು ತಪ್ಪು-ಸರಿಗಳನ್ನು ವಾದ ಮಾಡಿ ತೀರ್ಮಾನಿಸುವ ಮಹತ್ವದ ಜವಬ್ದಾರಿಯನ್ನು ಪಡೆದುಕೊಂಡರು.

ಸ್ವತಂತ್ರ ಪೂರ್ವದಲ್ಲಿ ವಕೀಲರನ್ನು ಬ್ಯಾರಿಸ್ಟರ್ ಎಂಬುದಾಗಿ ಸಂಭೋದಿಸಿಸುತ್ತಿದ್ದರು, ಭಾರತದ ಅತ್ಯುನ್ನತ ಮಹನೀಯರು, ಸ್ವತಂತ್ರ ಹೋರಾಟಗಾರರು ಬ್ಯಾರಿಸ್ಟರ್ ಪದವಿಯನ್ನು ಪಡೆದಿರುವುದನ್ನು ನಾವು ಇಲ್ಲಿ ಗಮನಿಸಬಹುದು, ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರನ್ನು ಒಳಗೊಂಡು ಸಿ.ರಾಜಗೋಪಾಲಚಾರಿ, ಲಾಲ ರಜಪತ್ ರಾಯ್, ಮದನ್ ಮೋಹನ್ ಮಾಳವೀಯ, ಮೋತಿಲಾಲ್ ನೆಹರು, ಪಂಡಿತ್ ಜವಹರಲಾಲ್ ನೆಹರು, ಸರದಾರ್ ವಲ್ಲಬಾಬಾಯಿ ಪಟೇಲ್, ಸಿ.ಆರ್.ದಾಸ್ ಮೊದಲಾದ ದಿಗ್ಗಜರು ಬ್ಯಾರಿಸ್ಟರ್ ಪದವಿ ಪಡೆದಿದ್ದರು, ಇತ್ತೀಚಿನ ರಾಜಕಾರಣಿಗಳಲ್ಲಿ ದಿವಂಗತ ಅರುಣ್ ಜಟ್ಲಿ, ಕಪಿಲ್ ಸಿಬಲ್, ರವಿಶಂಕರ್ ಪ್ರಸಾದ್, ಪ.ಚಿದಂಬರಂ, ಸಲ್ಮಾನ್ ಕುರ್ಶಿದ್ ಮೊದಲಾದವರು ಕಾನೂನು ಪದವಿ ಪಡೆದು ಖ್ಯಾತ ನಾಮರಾಗಿದ್ದಾರೆ, ಹೇಳುತ್ತಾ ಹೋದರೆ ಭಾರತದಲ್ಲಿ ಪ್ರಖ್ಯಾತ ನ್ಯಾಯವಾದಿಗಳ ದೊಡ್ಡ ಪಟ್ಟಿಯೇ ಬೆಳೆಯುತ್ತದೆ.

ಭಾರತದಲ್ಲಿ ನ್ಯಾಯಾಂಗ ವ್ಯವಸ್ಥೆ ತನ್ನದೇ ಆದ ಅತ್ಯುನ್ನತ ಸ್ಥಾನ ಪಡೆದಿದ್ದು ಶಾಸಕಾಂಗ, ಕಾರ್ಯಾಂಗಗಳಂತೆ ನ್ಯಾಯಾಂಗವೂ ಸ್ವತಂತ್ರ ಕಾರ್ಯನಿರ್ವಹಣಾ ಸಂಸ್ಥೆಯಾಗಿದೆ. ಪ್ರತಿಯೊಬ್ಬರೂ ನ್ಯಾಯಾಲಯಗಳು ನೀಡುವ ತೀರ್ಪಿಗೆ ಬದ್ಧರಾಗಿರಲೇಬೇಕಾಗಿರುತ್ತದೆ, ದೇಶದಲ್ಲಿ ಶಾಂತಿ ಕಾಪಾಡುವಲ್ಲಿ ನ್ಯಾಯಲಯಗಳ ಪಾತ್ರ ಮಹತ್ವದ್ದಾಗಿದೆ. ಸಣ್ಣ-ಪುಟ್ಟ ಸಮಸ್ಯೆಗಳಿಂದ ಹಿಡಿದು ಅತ್ಯಂತ ಜಟಿಲ, ಕ್ಲಿಷ್ಟಕರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನ್ಯಾಯಾಲಯಗಳು ಮಹತ್ವದ ಪಾತ್ರ ವಹಿಸುತ್ತದೆ. "ಭಾರತ ಸಂವಿಧಾನದ ಪಿತಾಮಹರಾದ ಡಾ॥ ಬಾಬ ಸಾಹೇಬ್ ಅಂಬೇಡ್ಕರ್‌ರವರು" ಸ್ವತಃ ಪ್ರಖ್ಯಾತ ವಕೀಲರಾಗಿದ್ದು, ಕಾನೂನು ವಿಷಯದಲ್ಲಿ ಪಂಡಿತರಾಗಿದ್ದರು, ಅನೇಕ ದೇಶ-ವಿದೇಶಗಳ ಕಾನೂನನ್ನು ಅಧ್ಯಯನ ಮಾಡಿ ನಮ್ಮ ಸಂವಿಧಾನದಲ್ಲಿ ನ್ಯಾಯಾಂಗ ವ್ಯವಸ್ಥೆಗೆ ಅತ್ಯಂತ ಮಹತ್ವದ ಸ್ಥಾನವನ್ನು ನಮ್ಮ ಸಂವಿಧಾನದಲ್ಲಿ ಕಲ್ಪಿಸಲಾಗಿದೆ. ಭಾರತದ ಅತ್ಯುನ್ನತ ನ್ಯಾಯಾಲಯವಾದ "ಸರ್ವೋಚ್ಚ ನ್ಯಾಯಾಲಯ" ನ್ಯಾಯಾಲಯದಿಂದ ಹಿಡಿದು ರಾಜ್ಯ 'ಉಚ್ಚ ನ್ಯಾಯಾಲಯಗಳು' ಜಿಲ್ಲಾ ಸತ್ರಾ ನ್ಯಾಯಾಲಯಗಳು ಮತ್ತು ಅಧೀನ ನ್ಯಾಯಾಲಯಗಳು ಪ್ರತಿ ನಿತ್ಯ ಅನೇಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಕಾರ್ಯನಿರತವಾಗಿವೆ.

ಬೃಹತ್ ಜನಸಂಖ್ಯೆ ಇರುವ ಭಾರತ ದೇಶದಲ್ಲಿ ಪ್ರತಿ ದಿನ ಸಾವಿರಾರು ಸಮಸ್ಯೆಗಳು, ವ್ಯಾಜ್ಯಗಳು ಉದ್ಭವಿಸುತ್ತವೆ, ಇವುಗಳನ್ನು ಬಗೆಹರಿಸುವ ಗುರುತರ ಜವಬ್ದಾರಿ ಮಾನ್ಯ ನ್ಯಾಯಾಲಯಗಳ ಮೇಲಿದೆ, ಅಂತೆಯೇ ನ್ಯಾಯಾಧೀಶರುಗಳು ವಕೀಲರು ಇವುಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ.

ಪ್ರಸ್ತುತ ಕಾನೂನಿನ ಬಗ್ಗೆ ಅರಿವು ಪ್ರತಿಯೊಬ್ಬ ಜನಸಾಮಾನ್ಯರಿಗೂ ಬೇಕಾಗಿದೆ, ಏಕೆಂದರೆ ಸಮಾಜದಲ್ಲಿ ಅಪರಾಧಗಳು ಕಡಿಮೆಯಾಗಿ ಉತ್ತಮ ನಾಗರೀಕ ಸಮಾಜ ನಿರ್ಮಾಣವಾಗಬೇಕು, ಶಾಂತಿ ನೆಲೆಸಬೇಕು, ಇದಕ್ಕೆ ಕಾನೂನಿನ ತಿಳುವಳಿಕೆ ಪ್ರತಿಯೊಬ್ಬ ಪ್ರಜೆಗೂ ಬಹಳ ಮುಖ್ಯ, ಇಂದು ಕಾನೂನು ಪದವಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಒಂದು ಉತ್ತಮ ಬೆಳವಣಿಗೆ ಅದರಲ್ಲಿಯೂ ಮಹಿಳೆಯರು ಪುರಷರಿಗೆ ಸರಿಸಮಾನರಾಗಿ, ನ್ಯಾಯಾಧೀಶರಾಗಿ, ವಕೀಲರಾಗಿ ಕಾರ್ಯನಿರ್ವಹಿಸುತ್ತಿರುವುದು ಉತ್ತಮ ಬೆಳವಣಿಗೆ ಮತ್ತು ಶ್ಲಾಘನೀಯ. ಕಾನೂನು ಪದವಿ ಅತ್ಯಂತ ಶ್ರೇಷ್ಠ ಪದವಿಯಾಗಿದ್ದು

ಇದರ ಶ್ರೇಷ್ಠತೆ ಗೌರವವನ್ನು ಉಳಿಸಿಕೊಂಡು ಹೋಗಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ, ಅದನ್ನು ನಾವೆಲ್ಲರೂ ಮಾಡೋಣ.

ನಮ್ಮ ವಿದ್ಯೋದಯ ಕಾನೂನು ಕಾಲೇಜು ಹಲವು ವರ್ಷಗಳಿಂದ ತುಮಕೂರಿನ ಸುತ್ತಮುತ್ತಲ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕಾನೂನು ಪದವಿ ಅಧ್ಯಯನಕ್ಕೆ ಶ್ರಮಿಸುತ್ತಿದೆ, ಇಂದಿಗೂ ರಾಜ್ಯದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿದ್ದು, ಈ ಕಾಲೇಜು ಉತ್ತಮ ಸ್ಥಾನಕ್ಕೆ ನಿಲ್ಲಲು ಈ ಕಾಲೇಜನ್ನು ಸ್ಥಾಪಿಸಿ ನಿರ್ಮಿಸಿದ ಅನೇಕ ಮಹನೀಯರ ಕೊಡುಗೆಯನ್ನು ಮರೆಯುವಂತಿಲ್ಲ, ಅವರಿಗೆ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಆಭಾರಿ, ಈ ಕಾಲೇಜಿನಲ್ಲಿ ಕಾನೂನು ಪದವಿ ಪಡೆದ ಹಲವಾರು ವಿದ್ಯಾರ್ಥಿಗಳು ಉತ್ತಮ ನ್ಯಾಯಾಧೀಶರಾಗಿ, ವಕೀಲರಾಗಿ ರಾಜ್ಯದ ವಿವಿದೆಡೆ ಕಾರ್ಯನಿರ್ವಹಿಸುತ್ತಿರುವುದು ಕಾಲೇಜಿಗೆ ಹೆಮ್ಮೆಯ ವಿಷಯ ಮತ್ತು ವಿದ್ಯಾರ್ಥಿಗಳಿಗೆ ಸ್ಪೂರ್ತಿ. ಅದೇ ರೀತಿ ಕಾಲೇಜಿನ ಸರ್ವತೋಮುಖ ಬೆಳವಣಿಗೆಗೆ ಕಾಲೇಜಿನಲ್ಲಿರುವ ಎಲ್ಲಾ ಉತ್ತಮ ಬೋಧಕ–ಬೋಧಕೇತರ ಸಿಬ್ಬಂಧಿ ವರ್ಗದ ಕೊಡುಗೆ ಅಪಾರ.

---

# ಕವನಗಳು

**ಕವನ–1**

ಇದು ವಿದ್ಯೋದಯ ಕಾನೂನು 'ಕಾಲೇಜು'
ಇಲ್ಲಿ ಓದುತ್ತಿರುವ ಹಲವರು ಇನ್ನೂ 'ಟೀನೇಜು'
ಕಷ್ಟಪಟ್ಟು ಕಟ್ಟುತ್ತಾರೆ ಪೋಷಕರು ಕಾಲೇಜು 'ಫೀಜು'
ಇಲ್ಲಿ ಓದಲೇಬೇಕು ಇಲ್ಲ ಯಾವುದೇ 'ಮುಲಾಜು'.

**ಕವನ–2**

ಪ್ರತಿಯೊಬ್ಬರಿಗೂ ಬೇಕು ಕಾನೂನು 'ಅರಿವು'
ಅದಕ್ಕೆ ಬೇಕು ಉತ್ತಮ 'ಗುರುವು'
ತುಂಬಾ ಸ್ನೇಹದಿಂದ ವರ್ತಿಸುತ್ತಾರೆ ಇಲ್ಲಿಯ 'ಉಪನ್ಯಾಸಕರು'
ಅವರೇ ನಮ್ಮ ಬದುಕಿನ 'ವಿನ್ಯಾಸಕರು'
ಹೇಳಿಕೊಡುತ್ತಾರೆ ಅವರು ಚೆನ್ನಾಗಿ 'ಪಾಠ'
ಈ ಕಾಲೇಜು ನಮಗೆ ಕಾನೂನು 'ವಿದ್ಯಾಪೀಠ'.

**ಕವನ–3**

ಮುಂದೆ ನೀ ಆಗಬೇಕೆಂದರೆ 'ವಕೀಲ'
ಕಾನೂನು ಕಲಿಯಬೇಕು ನೀ 'ಕೆಲಕಾಲ'
ಪದವಿ ಪಡೆದ ಮೇಲೆ ಬರುತ್ತದೆ ನಿನಗೆ 'ಸಕಾಲ'
ಆಮೇಲೆ ನೀ ಮಾಡು ಅನೇಕರಿಗೆ 'ಅನುಕೂಲ'.

**ಕವನ–4**

ಪಡೆಯಬೇಕು ನಾನು ಇಲ್ಲಿ ಉತ್ತಮ 'ಅಂಕ'
ಇದಕ್ಕೆ ಕೊಡಬೇಕಿಲ್ಲ ಯಾವುದೇ 'ಸುಂಕ'
ಎಲ್ಲರಿಗೂ ಹೇಳುತ್ತೇನೆ ಕೇಳಿ 'ಗಮನವಿಟ್ಟು'
ಚೆನ್ನಾಗಿ ಓದಿ 'ದಯವಿಟ್ಟು'.

**ಕವನ–5**

ಗೌರವಿಸಬೇಕು ನಾವು ನಮ್ಮ 'ಸಂವಿಧಾನ'
ಇದು ತಿಳಿಸುತ್ತದೆ ನಮಗೆ ಬದುಕುವ 'ವಿಧಾನ'
ಮೂರು ವರ್ಷ (ಐದು ವರ್ಷ) ಕಲಿ ನೀ ಇದನ್ನು 'ನಿಧಾನ'
ಇದಕ್ಕೆ ಬೇಕು ತುಂಬಾ 'ಸಮಾಧಾನ'.

**ಕವನ–6**

ಇಲ್ಲಿ ಬರೆದಿದ್ದೇನೆ ಕೆಲವು ಪುಟ್ಟ 'ಕವನ'
ಬೇಡ ನನಗೆ ಯಾವುದೇ 'ಸನ್ಮಾನ'
ಇವುಗಳನ್ನು ಓದಿದ್ದಕ್ಕೆ ನಿಮಗೆ ನನ್ನ 'ನಮನ'
ಸಂತೋಷ ತುಂಬಿರಲಿ ನಿಮ್ಮ ಜೀವನ 'ಅನುದಿನ'.



**ಚೇತನ್ ಕುಮಾರ್. ಬಿ.ಹೆಚ್**
**2ನೇ ಸೆಮಿಸ್ಟರ್, 3ನೇ ವರ್ಷ, ಎಲ್.ಎಲ್.ಬಿ.**

# ಕಂಡಿದ್ದು ಕೇಳಿದ್ದು

ಜನ್ಮ
ಅಮ್ಮನಿಂದಲೇ ಆಗುವುದು.
ಅಮ್ಮನಿಲ್ಲದೇ ಆಗದು.

ಬರಹ
ಕಾಣುವುದು ಮತ್ತು ಕಾಡುವುದು.

ಪಾಪ–ಪುಣ್ಯ
ಸ್ವಾರ್ಥಕ್ಕಾದರೆ ಪಾಪ.
ಸಾರ್ಥಕ ವಾದರೆ ಪುಣ್ಯ.

ಬಡತನ ಸಿರಿತನ
ಅಮ್ಮ ಹರಿದ ರವಿಕೆ ತೊಟ್ಟರೆ ಬಡತನ.
ಹುಡುಗಿ ಹರಿದ ರವಿಕೆ ತೊಟ್ಟರೆ ಸಿರಿತನ.

ವಿಷ ಅಮೃತ
ಜ್ಞಾನದಿಂದ ಅಹಂಕಾರ ಬಂದರೆ ಅದು ವಿಷ.
ಜ್ಞಾನದಿಂದ ವಿನಯ ಮೂಡಿದರೆ ಅದು ಅಮೃತ.

ಸ್ನೇಹ–ಪ್ರೀತಿ
ಪ್ರೀತಿಯ ಪ್ರತೀಕ ಸಹಿಷ್ಣುತೆ
ಸ್ನೇಹದ ಪ್ರತೀಕ ಸಹೃದಯತೆ.

ತಂಗಾಳಿ–ಬಿರುಗಾಳಿ
ನಮ್ಮಿಬ್ಬರ ನಡುವೆ ಬೀಸುತ್ತಿತ್ತು
ಆತ್ಮೀಯತೆಯ ತಂಗಾಳಿ
ನಮ್ಮಿಬ್ಬರ ನಡುವೆ ಬಿತ್ತಿದರೊಬ್ಬರು
ಅಸಹಿಷ್ಣುತೆಯ ಬಿರುಗಾಳಿ.

ಹಿಂದಿನ–ಇಂದಿನ
ಗುರುವೇ ನಮಃ ಎನ್ನುವುದು ಹಿಂದಿನ ಕಾಲ.
ಗುರವೇನು ಮಾಹಾ.!
ಎನ್ನುವುದು ಇಂದಿನ ಕಾಲ.

ಕಲಿಸುವ ಕಲಿಯುವ
ನೀ ಕಲಿಸಿದಂತೆ ನಾ ಕಲಿಯಲೋಲ್ಲೆ.!
ನಾ ಕಲಿತಂತೆ ನೀ ಕಲಿಸಬಲ್ಲೆಯ..?



**ಅಭಿಲಾಷ್ ಹೆಚ್.**
**5ನೇ ಸೆಮಿಸ್ಟರ್, 3 ವರ್ಷ ಎಲ್.ಎಲ್.ಬಿ.**

# ಅತ್ಯಾಚಾರವೇಕೆ ?

ಎಲ್ಲಿದೆ ಸ್ವಾತಂತ್ರ್ಯ ಹೆಣ್ಣಿಗೆ ?
ಎಲ್ಲಿದೆ ರಕ್ಷಣೆ ಹೆಣ್ಣಿಗೆ ?
ಎಲ್ಲಿದೆ ಗೌರವ ಹೆಣ್ಣಿಗೆ ?
ಎಲ್ಲಿದೆ ನ್ಯಾಯ ಹೆಣ್ಣಿಗೆ ?
ಎಲ್ಲಿದೆ ನೆಮ್ಮದಿಯಿಂದ ಬದುಕುವ ಹಕ್ಕು ಹೆಣ್ಣಿಗೆ ?

ಹೆಣ್ಣು ನಿಮ್ಮ ತಾಯಿ ಅಲ್ಲವೇನು?
ಹೆಣ್ಣು ನಿಮ್ಮ ಸತಿ ಅಲ್ಲವೇನು? ಹೆಣ್ಣು ನಿಮ್ಮ ಮಗಳಲ್ಲವೇನು? ಹೆಣ್ಣು ನಿಮ್ಮ ಸೋದರಿಲ್ಲವೇನು?
ನಮ್ಮ ಭಾರತ ಮಾತೆಯು ಹೆಣ್ಣಲ್ಲವೇನು?

ಹೆಣ್ಣನ್ನು ಯಾಕೆ ಗುರಿ ಪಡಿಸಿದ್ದೀರಿ ಬಲತ್ಕಾರವೆಂಬ ಕ್ರೂರ ಶಿಕ್ಷೆಗೆ?
ಅವಳಿಲ್ಲದಿದ್ದರೆ ನಿಮ್ಮ ಜೀವನ ಸಮಾನಾಗುವುದು ಸೊನ್ನೆಗೆ
ನಿಮ್ಮ ಕ್ರೂರತ್ವ ಆರಂಭ ತ್ರೇತಾತಯುಗದ ಸೀತೆಗೆ,
ನಿಮ್ಮ ನೀಚತ್ವದ ಅವಮಾನದ ದ್ವಾಪರದ ದ್ರೌಪದಿಗೆ,
ಕಲಿಯುಗದಲ್ಲಾದರೂ ಕೊನೆಯಾಗುವುದೆಂದಿಗೆ...?

ನಿಮ್ಮ ದೌರ್ಜನ್ಯಕ್ಕೆ ಬಲಿಯಾಯಿತು ಒಂಬತ್ತು ತಿಂಗಳ ಹಸುಗುಸು,
ಓ ಭಗವಂತ ಇಂತಹ ಪಾಪಿಗಳನ್ನು ನೀನೇ ಸರಿಯಾಗಿ ಶಿಕ್ಷಿಸು
ನಮ್ಮ ಹೆಣ್ಣು ಕುಲವನ್ನು ರಕ್ಷಿಸು..

ಕಂಡರ್ಯಾರೋ ರಾಮ ರಾಜ್ಯದ ಕನಸು
ಆಗಬಾರದೇ ರಾಮ ರಾಜ್ಯದ ಕನಸಲ್ಲಾದರೂ ನನಸು..!

ಇಲ್ಲಿ ನ್ಯಾಯ ದೇವತೆಯ ಕಣ್ಣಿಗೆ ಕಪ್ಪು ಬಟ್ಟೆಯನ್ನು ಕಟ್ಟಿದ್ದಾರ,
ಇಲ್ಲ ನ್ಯಾಯದ ಕಣ್ಣಿಗೆ ಕಪ್ಪು ಬಟ್ಟೆಯನ್ನು ಕಟ್ಟಿದ್ದಾರ ?
ಇನ್ನು ಉಳಿದಿದೆಯೇ ನಮ್ಮ ಭಾರತೀಯ ಸಂಸ್ಕಾರ ?
ನೀವು ಹೆಣ್ಣಿಗೆ ನೀಡಿದ ಶಿಕ್ಷೆ ಅತ್ಯಾಚಾರ
ಎಂದು ಆಗುವುದು ನಿಮ್ಮ ಅಂತ್ಯಾಚಾರ ?
ನಿಮ್ಮ ಆದಿಯೂ ಹೆಣ್ಣಿನಿಂದಲೇ
ನಿಮ್ಮ ಅಂತ್ಯವೂ ಹೆಣ್ಣಿಂದಲೇ



ಕವಿತ ಟಿ.ವಿ.
4ನೇ ಸೆಮಿಸ್ಟರ್, 3 ವರ್ಷ ಎಲ್.ಎಲ್.ಬಿ.

# ಪ್ರೀತಿಯ ವಿಲಾಸ

ಪಿನಾಕನ ಕರಿಕಾಲನನು ಕೈಲಾಸ ಸಾಮ್ರಾಜ್ಯವನ್ನು ಆಳುತ್ತಿದ್ದ ಅವನ ಹೆಸರಿಗೆ ತಕ್ಕಂತೆ  ಆನೆ ಎಷ್ಟು ಶಕ್ತಿ ಶಾಲಿ, ವೈರಿಗಳ ಪಾಲಿಗೆ ಅವನು ಕಾಲನಂತೆ, ಸೌಂದರ್ಯದಲ್ಲಿ ಮನ್ಮಥನಂತೆಯು, ದಾನದಲ್ಲಿ ಕರ್ಣನಂತೆಯು, ನ್ಯಾಯ ನೀತಿಯಲ್ಲಿ ಧರ್ಮರಾಜನಂತೆಯು, ಬಲದಲ್ಲಿ ಭೀಮನಂತೆಯು, ಏಕಾಗ್ರತೆಯಲ್ಲಿ ಅರ್ಜುನನಂತೆಯು, ಇರುತ್ತಾನೆ. ಬಾಲ್ಯದಿಂದಲೂ ಕರಿಕಾಲನಿಗೆ ಯುದ್ಧ, ರಾಜ್ಯವನ್ನು ವಿಸ್ತೀರ್ಣ ಮಾಡುವುದು ಅವನ ಏಕೈಕ ಗುರಿ ಮತ್ತು ಉದ್ದೇಶವಾಗಿರುತ್ತದೆ ಶಾಸ್ತ್ರ ಮತ್ತು ಶಸ್ತ್ರ

ಎರಡರಲ್ಲೂ ಪ್ರವೀಣನಾಗಿರುತ್ತಾನೆ. ಯುದ್ಧ ಶಿಕ್ಷಣದಲ್ಲಿ ಪರಶುರಾಮರಿಂದ ವಿದ್ಯೆ ಪಡೆದಿರುವ ಭೀಷ್ಮನಂತೆ ಸಾಧನೆಯನ್ನು ಮಾಡಿರುತ್ತಾನೆ.

ರಾಜ್ಯ ವಿಸ್ತೀರ್ಣದಲ್ಲಿ ತೊಡಗಿರುವ ಕರಿಕಾಲನ್ನು ಒಂದು ಬಾರಿ ದುರ್ಗಾಪುರ ಎಂಬ ರಾಜ್ಯ ಮೇಲೆ ಆಕ್ರಮಣ ಮಾಡುತ್ತಾನೆ, ಅವನಿಗೆ ಆ ಯುದ್ಧದಲ್ಲಿ ಜಯ ಸಿಗುತ್ತದೆ.

ಯುದ್ಧದ ನಂತರ ಅವನು ಸೇನೆಯೊಂದಿಗೆ ಸತಿ ನದಿ ತೀರದ ಬಳಿ ಹೋಗುತ್ತಿರುವಾಗ, ಆಡಳಿತ ಕಾರ್ಯದ ಬಗ್ಗೆ ಚರ್ಚೆ ಮಾಡುತ್ತಾ ಅವನ ಪ್ರೀತಿಯ ಅಶ್ವ ಭೈರವನ ಮೇಲೆ ಕುಳಿತು ಹೋಗುತ್ತಿದ್ದನು, ಆ ಸಮಯದಲ್ಲಿ ಪಿನಾಕರಿಕಲನು, ಒಬ್ಬ ಯುವತಿಯನ್ನು ನೋಡುತ್ತಾನೆ ಆಕೆಯು ಕಣ್ಣುಗಳನ್ನು ಬಿಟ್ಟು ಮಿಕ್ಕ ಮುಖ ಭಾಗವನ್ನು ದುಪಟ್ಟಾ ಮುಚ್ಚಿಕೊಂಡಿರುತ್ತಾಳೆ, ಆ ಮುಸುಕುದಾರಿ ಯುವತಿ ಕಂಡ ಕೂಡಲೇ ರಾಜಕರಿಕಾಲ ಆ ಕಣ್ಣುಗಳನ್ನು ಏಕಾಗ್ರತೆಯಿಂದ ನೋಡುತ್ತಾ ಕಣ್ಣುಗಳ ಮೇಲೆ ಆಕರ್ಷಿತನಾಗುತ್ತಾನೆ ರಾಜ ಕರಿಕಾಲನು ಸೇನೆ ಮತ್ತು ಮಂತ್ರಿಗಳು ಇದ್ದ ಕಾರಣ ಆ ಯುವತಿ ಜೊತೆ ಮಾತನಾಡಲಾಗುವುದಿಲ್ಲ. ಮೀನಿನ ಕಣ್ಣುಗಳಂತೆ ಸುಂದರ ಮತ್ತು ಸಾರಂಗದ ಕಣ್ಣುಗಳಂತಿರುತ್ತದೆ.

ಅರಮನೆಯ ಅನಂತಪುರದಲ್ಲಿ ಆ ಯುವತಿಯ ಕಣ್ಣಿನ ಚಿತ್ರವನ್ನು ಚಿತ್ರಪಟದಲ್ಲಿ ಬಿಡಿಸುತ್ತಾನೆ. ದಿನ ಕಳೆದಂತೆ ಕಣ್ಣಿನ ಚಿತ್ರವನ್ನು ನೋಡುತ್ತಾ ನೋಡುತ್ತಾ ರಾಜಾ ಕರಿಕಾಲನಿಗೆ ಆ ಕಣ್ಣಿನ ಮೇಲೆ ಹೆಚ್ಚು ಆಕರ್ಷಿತನಾಗುತ್ತಾನೆ.

ಕರಿಕಲನಿಗೆ ಆ ಕಣ್ಣುಗಳ ಮೇಲಿನ ಆಕರ್ಷಣೆಗೆ ರಾಜನು ಮನ ಸೋಲುತ್ತಾನೆ. ನಂತರ ಅವನ ಮಂತ್ರಿಮಂಡಲಕ್ಕೆ ಕಣ್ಣಿನ ಯುವತಿಯನ್ನು ಹುಡುಕಿ ತರಲು ಆದೇಶಿಸುತ್ತಾನೆ. ಕೆಲವು ದಿನಗಳ ನಂತರ ಕರಿಕಾಲನ ಸೇನೆ ಮತ್ತು ಮಂತ್ರಿಮಂಡಲದಿಂದ ರಾಜನ ಆದೇಶಕ್ಕೆ ಬಾರಿ ನಿರಾಸೆ ಮರಳಿ ಬರುತ್ತಾರೆ.

ಪಿನಾಕ ಕರಿಕಾಲನಿಗೆ ಕಣ್ಣಿನ ಯುವತಿ ಮೇಲೆ ಪ್ರೀತಿ ಹೆಚ್ಚಾಗಿ ರಾಜ್ಯದ ಆಡಳಿತ ಕಾರ್ಯಗಳಿಂದ ವಿಮುಕ್ತನಾಗುತ್ತಾನೆ ರಾಜ್ಯದ ಎಲ್ಲಾ ಕಾರ್ಯಗಳಿಂದ ಮತ್ತು ಅವನ ಕುಟುಂಬದಿಂದಲು ವಿರಕ್ತನಾಗುತ್ತಾನೆ. ಒಂದು ದಿನ ರಾಜನಿಗೆ ಒಂದು ಪತ್ರ ಬರುತ್ತದೆ  ಅದರಲ್ಲಿ ಒಂದು ಯುವತಿ ರಾಜನ ಸೌಂದರ್ಯಕ್ಕೆ ಅವನ ಧೈರ್ಯಕ್ಕೆ ಮೆಚ್ಚಿ ಆ ಪತ್ರವನ್ನು ಬರೆದಿರುತ್ತಾರೆ, ರಾಜನು ಆ ಪತ್ರಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಡುವುದಿಲ್ಲ ಏಕೆಂದರೆ ಅವರಿಗೆ ಅಂತಹ ಪತ್ರಗಳು ದಿನಕ್ಕೆ ಸಾವಿರ ಬರುತ್ತಿರುತ್ತದೆ.

ರಾಜಕರಿಕಾಲನಿಗೆ ಪ್ರತಿದಿನ ಸರಿಯಾದ ಸಮಯಕ್ಕೆ ಆ ಪತ್ರವು ಬರುತ್ತಿರುತ್ತದೆ ರಾಜನಿಗೆ ಆ ಪತ್ರದ ಬರವಣಿಗೆ ಮತ್ತು ಅದರಲ್ಲಿರುವ ವಿಷಯಕ್ಕೆ ಮೆಚ್ಚಿ ಆ ಪತ್ರಕ್ಕೆ ಅವನು ಪ್ರತ್ಯುತ್ತರವನ್ನು ನೀಡುತ್ತಾನೆ. ಪತ್ರದ ಬರವಣಿಗೆ ಮತ್ತು ಸುಂದರ ಅಕ್ಷರಗಳು, ರಚನೆ, ವ್ಯಾಕರಣ ರಾಜನನ್ನು ಆಕರ್ಷಿಸುತ್ತದೆ. ಪ್ರೇಮಕವಿ ಕಾಳಿದಾಸನ ಪತ್ರಗಳು ಹೇಗಿರುತ್ತದೆಯೋ ಆ ಎಲ್ಲಾ ಉದಾಹರಣೆಗಳು ಈ ಪತ್ರದಲ್ಲಿ ಇರುತ್ತದೆ.

ಕರಿಕಾಲನು ಪತ್ರದ ಬರವಣಿಗೆ ಮನ ಸೋಲುತ್ತಾನೆ, ಪ್ರತಿ ದಿನವೂ ರಾಜ ಕರಿಕಾಲನು ಈ ಪತ್ರ ಬರುವಿಕೆಗೆ ಕಾದು ಕುಳಿತಿರುತ್ತಾನೆ, ರಾಜ ಕರಿಕಲನು ಆ ಪತ್ರದಲ್ಲಿ ಯುವತಿಗೆ ತನ್ನ ಪ್ರೇಮ ನಿವೇದನೆಯನ್ನು ಮಾಡಿಕೊಳ್ಳುತ್ತಾನೆ, ನಂತರ ಅದಕ್ಕೆ ಪ್ರತಿ ಉತ್ತರವಾಗಿ ಆ ಯುವತಿ ರಾಜಕರಿಕಾಲನಿಗೆ ಒಂದು ದಿನ ಭೇಟಿಯಾಗಲು ಸೂಚಿಸುತ್ತಾಳೆ.

ರಾಜಕರಿಕಾಲನು ಆ ಪತ್ರಕ್ಕೆ ಉತ್ತರವಾಗಿ ಅವನು ಏಕಾಂಗಿಯಾಗಿ ಬರಲು ಒಪ್ಪುತ್ತಾನೆ. ರಾಜನಿಗೆ ಆ ದಿನ ರಾತ್ರಿ ನಿದ್ದೆಯೂ ಬರದೆ ಯಾವಾಗ ಬೆಳಗಾಗುತ್ತದೆಯೋ ಎಂದು ಕಾತರಿಸುತ್ತ ಕಾಯುತ್ತಿರುತ್ತಾನೆ.

ಮರುದಿನ ಬೆಳಗ್ಗೆ ಸಮಯಕ್ಕೆ ಸರಿಯಾಗಿ ಆ ಯುವತಿ ಹೇಳಿದ ಸತಿ ನದಿ ತೀರಕ್ಕೆ ರಾಜಕರಿಕಾಲನ್ನು ಹೋಗುತ್ತಾನೆ ಆ ಸಮಯಕ್ಕೆ ಅವನು ಅಲ್ಲಿ ನೋಡಿದಾಗ ಅವನಿಗೆ ಒಂದು ಆಶ್ಚರ್ಯ ಕಾದಿರುತ್ತದೆ ಅಲ್ಲಿ ಒಬ್ಬ ಕುರೂಪಿ ಯುವತಿ ರಾಜನಿಗಾಗಿ ಕಾಯುತ್ತಿರುತ್ತಾಳೆ ರಾಜನಿಗೆ ಆಶ್ಚರ್ಯ ಮತ್ತು ನಿರಾಸೆ ಎರಡು ಆಗುತ್ತದೆ ಆ ಕುರೂಪಿ ರಾಜನಿಗೆ ಹೇಳುತ್ತಾಳೆ ರಾಜನೇ, ನೀನು ನನ್ನ ಬರವಣಿಗೆ ಪತ್ರಗಳಿಗೆ ಪ್ರೀತಿಸಿದೆಯೋ ಅಥವಾ ನನ್ನ ಸೌಂದರ್ಯವನ್ನು ಪ್ರೀತಿಸಿದೆಯೋ ಎಂದಾಗ ಕರಿಕಾಲನುಮೌನದಿಂದ ತಲೆಯನ್ನು ತಗ್ಗಿಸುತ್ತಾನೆ ಮತ್ತು ನಿರಾಸೆ ಭಾವ ಅವನಲ್ಲಿ ಮೂಡುತ್ತದೆ.

ಸೋಲೇ ಕಾಣದ ಕರಿಕಾಲನು ಒಬ್ಬ ಕುರೂಪಿ ಮಹಿಳೆಯರು ಎದುರು ಸೋಲುತ್ತಾನೆ, ಕರಿಕಾಲನ ಮನದಲ್ಲಿ ಅಂತರ್ಯುದ್ಧ ಶುರುವಾಗುತ್ತದೆ, ರಾಜನ ಈ ಭಾವವನ್ನು ನೋಡಿದ ಆ ಯುವತಿ ರಾಜನಿಗೆ ಹೇಳುತ್ತಾಳೆ ನಿಮ್ಮನ್ನು ಪರೀಕ್ಷಿಸಲು ನಾನು ಈ ನಾಟಕ ಮಾಡಬೇಕಾಗಿತ್ತು ರಾಜನೇ ನಿಮ್ಮ ನಿಜವಾದ ಹೃದಯಸಿಂಹಾಸದಲ್ಲಿರುವ ಅರಸಿ ಅಲ್ಲಿರುವಳು ಹೋಗು ಎಂದಾಗ ರಾಜನು ಆಶ್ಚರ್ಯದಿಂದ ಮರಳಿ ಪ್ರೇಮಕವಿ ಯುವತಿ ಸಿಗುವ ಮನೋಭಾವದಿಂದ ಹೋಗುತ್ತಾನೆ ಅಲ್ಲೊಂದು ಆಶ್ಚರ್ಯ ರಾಜನಿಗೆ ಎದುರಾಗುತ್ತದೆ ಅದೇನೆಂದರೆ ಹಿಂದೆ ಅವನು ಆಕರ್ಷಿತಗೊಂಡ ಸುಂದರ ಕಣ್ಣಿನ ಯುವತಿ ಮತ್ತು ಪ್ರೇಮ ಕವಿ ಯುವತಿಯು ಒಬ್ಬಳೇ ಆಗಿರುತ್ತಾಳೆ.



**ಲೋಕೇಶ್ ಮಹಾಂತ**
**4 ನೇ ಸೆಮಿಸ್ಟರ್ 3 ವರ್ಷದ ಎಲ್.ಎಲ್.ಬಿ**

# ಕಾನೂನು ತಿಳಿದು ಕದೀಮನಾಗುವ ಆಸೆ ನನ್ನದು

ಅರೆ..!
ಇವನ್ಯಾರು
ಇಂತಹ ಆಸೆಯುಳ್ಳವನು ಎಂದಿರಾ..?
ಹೌದು..
ಆದರೆ,
ನಿಮ್ಮ ಯೋಚನೆಯಲ್ಲಿ ಬಂದ ಖದೀಮನಲ್ಲ ನಾನು..

ಭ್ರಷ್ಟಾಚಾರವನ್ನು ಮುಕ್ತಗೊಳಿಸುವ
ಜಾತಿ ವರ್ಣವನ್ನು ಹೊಡೆದೋಡಿಸುವ
ಬಡವ ಶ್ರೀಮಂತನೆಂಬ ಅಂತಸ್ತು ತಿಳಿಸುವ
ಮೇಲು ಕೀಳೆಂಬ ಭಾವನೆ, ಬಲಿ ಕೊಡುವ
ಸಾಮಾನ್ಯ ಅಸಾಮಾನ್ಯನೆಂಬ ಅಸಮಾನತೆಯನ್ನು ಹೋಗಲಾಡಿಸುವ,
ಧನಿಕರ ಮೂಲಕ ಕೂಲಿ ಶ್ರಮಿಕರಿಗೆ
ಎಲ್ಲರಿಗೂ ಒಂದೇ ಎಂಬ ಕಾನೂನು ರೂಪಿಸಿ
ನಾವೆಲ್ಲರೂ ಒಂದೇ

ಕಾನೂನಿನ ಮುಂದೆ ಎಲ್ಲರೂ ಸಮಾನರು
ಎಂದು ಅದ್ಭುತ ವಾಕ್ಯಕ್ಕೆ ಅತ್ಯದ್ಭುತ ಅರ್ಥ ತಂದುಕೊಟ್ಟು ಇಂತಹ ಒಬ್ಬ ಮಹಾನ್ ಕದಿಮನಾಗಬೇಕೆಂಬ
ಪುಟ್ಟ ಆಸೆ ನನ್ನದು.
ನನ್ನ ಆಸೆ ಅದೆಷ್ಟು ಬೇಗ ಈಡೇರಲಿ ಎಂದು ಎಲ್ಲರಿಗೂ ಶುಭ ಹಾರೈಸುವೆ ಸಾಧ್ಯವಾದಷ್ಟು ಸಹಕರಿಸಿ
ಎಂದು ಕೇಳಿಕೊಳ್ಳುವ ನಿಮ್ಮವ ನಿಮ್ಮ ಇಂದ್ರ ನರೇಂದ್ರ.

**ಜನಿಸಿದರೆ ಮಾನವ ಜೀವಿಯಾಗಿ ಮರಣ ಹೊಂದುವ ಮುನ್ನ ಬಾ ಕಾನೂನು**
**ತುಳಿಯಲು ವಿದ್ಯೋದಯ ಕಾನೂನು ಕಾಲೇಜಿಗೆ ನೀ ಉತ್ತಮ ವಿದ್ಯಾರ್ಥಿಯಾಗಿ**

ಬಂದರೆ ಭೂಮಿಗೆ
ಒಂದೊಮ್ಮೆ ಬಂದೋಗು ನಮ್ಮಕಲ್ಪತರ ನಾಡಿಗೆ..

ನಡೆದಾಡುವ ದೇವರು
ನೆಲೆಸಿದ ನಾಡು ನಮ್ಮದು.

ಎಷ್ಟೋ ನ್ಯಾಯವಾದಿಗಳಿಗೆ ಬುನಾದಿ ಹಾಕಿಕೊಟ್ಟ
ಶ್ರೀ ಶೇಷಾದ್ರಿ ಅವರು ಬದುಕುಳಿದ ಬದುಕುಳಿದು ಎಂದು ಮಾಸದ ಜನಮನದಲ್ಲಿ
ಅತ್ಯುತ್ತಮ ಹೆಸರುಗಳಿಸಿರುವ ವಿದ್ಯೋದಯ ಕಾಲೇಜು ದೇಗುಲ ಇರುವ
ಈ ಕಲ್ಪತರು ನಾಡು ಎಂದು, ಎಂದೆಂದೂ ಅದ್ಭುತ ಅತ್ಯದ್ಭುತ..



ನರೇಂದ್ರ ಕುಮಾರ್ ಎನ್. ಆರ್.
2ನೇ ಸೆಮಿಸ್ಟರ್, 3 ವರ್ಷದ ಎಲ್ಎಲ್.ಬಿ.

# ಸ್ವಾಮಿ ವಿವೇಕಾನಂದರು ಸಾರಿದ ರಾಷ್ಟ್ರೀಯತೆ..

ಸಂಸ್ಕೃತಿ, ಸಂಸ್ಕಾರ ಯಾವುದೇ ದೇಶದ ,ವ್ಯಕ್ತಿಯ ಬಗ್ಗೆ ಗೌರವ ಹೆಚ್ಚಿಸುವ ಮಾಪನಗಳು.ಇದು ದೇಶದಿಂದ ದೇಶಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾದರೂ ಒಟ್ಟೂ ಚಿತ್ರಣಕ್ಕೆ ಇದರ ಕೊಡುಗೆ ಅಪಾರ.ಭಾರತೀಯತೆ ಎಂಬುದು ಇಂತಹ ಮೌಲ್ಯಗಳ ಮೊತ್ತವೇ ಆದರೂ ಇದನ್ನು ಹೆಚ್ಚಿಸುವಲ್ಲಿ.ದೇಶದ ಗೌರವ ,ಹಿರಿಮೆ ಹಾಗೂ ಗರಿಮೆಗಳ ಗರಿಯನ್ನು ಭಾರತ ಮಾತೆಯ ಮುಡಿಗೆ ಏರಿಸುವಲ್ಲಿ ಹಲವಾರು ಪ್ರಭಾವಿ ವ್ಯಕ್ತಿಗಳ ಕೊಡುಗೆ ಇದೆ.ಇಂತಹ ಹಲವಾರು ವ್ಯಕ್ತಿಗಳಲ್ಲಿ ಇಂದಿಗೂ, ಎಲ್ಲರಿಗೂ ಮೊದಲು ನೆನಪಾಗುವ ವ್ಯಕ್ತಿ ಶ್ರೀ ಸ್ವಾಮಿ ವಿವೇಕಾನಂದರು ಎಂದರೆ ಅತಿಶಯೋಕ್ತಿಯಲ್ಲ.ಭಾರತ ಕಂಡ ಅತ್ಯಂತ ಪ್ರಭಾವಿ ಮತ್ತು ಪ್ರಸಿದ್ಧ ತತ್ವಜ್ಞಾನಿಗಳಲ್ಲಿ ಒಬ್ಬರಾದ ಇವರು ಸದಾ ಪ್ರಾತಃ ಸ್ಮರಣೀಯರು.

ಸ್ವಾಮಿ ವಿವೇಕಾನಂದರು ಎಂದರೆ ಯುವ ಜನತೆ,ಯುವ ಜನತೆ ಎಂದರೆ ಸ್ವಾಮಿ ವಿವೇಕಾನಂದರು ಎನ್ನುವಷ್ಟರ ಮಟ್ಟಿಗೆ ಇವರ "ಏಳಿ ಎದ್ದೇಳಿ ಗುರಿ ಮುಟ್ಟುವವರೆಗೆ ನಿಲ್ಲದಿರಿ "ಎಂಬ ವಾಕ್ಯ ಪ್ರಚಲಿತ.ಅವರ ನಿರ್ಭಯತೆ,ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ಪ್ರಾಮಾಣಿಕ ಚಿಂತನೆಗಳು ಇಂದಿಗೂ ಪ್ರಚಲಿತ.ಒಬ್ಬ ದಾರ್ಶನಿಕರ ದೂರದೃಷ್ಟಿ ಇಡೀ ದೇಶದ ಘನತೆಯನ್ನು ಎತ್ತಿ ಹಿಡಿಯುವಲ್ಲಿ ಹೇಗೆ ಪಾತ್ರ ನಿರ್ವಹಿಸುತ್ತದೆ ಎಂಬುದು ಇವರ ಕೃತಿ ಹಾಗೂ ಕಾರ್ಯಗಳಿಂದ ಗುರುತಿಸಬಹುದು. ಹಾಗಾಗಿಯೇ ಆಂಗ್ಲ ಆಡಳಿತದ ದಾಸ್ಯದಲ್ಲಿ ಮುಳುಗಿದ್ದ ನಮ್ಮ ನಾಡಿನ ರಾಷ್ಟ್ರೀಯ ಪುನರುತ್ಥಾನಕ್ಕೆ ಹಾದಿ ಸುಗಮ ಗೊಳಿಸಿದ ಅಗ್ರಗಣ್ಯರು ಹೌದು.ಭಾರತೀಯರಲ್ಲಿ ಅಡಗಿದ್ದ,ಚದುರಿ ಹೋದ ಆಧ್ಯಾತ್ಮಿಕ ಶಕ್ತಿಯನ್ನು ಒಗ್ಗೂಡಿಸಿದರೆ ಮಾತ್ರ ರಾಷ್ಟ್ರೀಯ ಏಕತೆಯ ಸಾಧನೆ ಸಾಧ್ಯವಾಗುವುದು ಎಂದು ಮನಗಂಡು ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿದರು.

ವಿವೇಕಾನಂದರು ಮತ್ತು ರಾಷ್ಟ್ರೀಯತೆ..

ಆಂಗ್ಲರ ದಾಸ್ಯದಲ್ಲಿ ಇದ್ದರೂ ಭಾರತೀಯರಿಗೆ ಅವರ ವಿರುದ್ಧ ಎದ್ದು ನಿಲ್ಲುವ ಸಾಮರ್ಥ್ಯವಿತ್ತು ಆದರೆ ಅದಕ್ಕೊಂದು ಸರಿಯಾದ ಮಾರ್ಗ ದರ್ಶನ ಬೇಕಿತ್ತು.ಹಲವಾರು ನಾಯಕರು ಇದ್ದರೂ ಕೇವಲ ರಾಜಕೀಯದ ಲೇಪದಿಂದ ಜನರನ್ನು ಒಗ್ಗೂಡಿಸಲು ಸಾಧ್ಯವಾಗುತ್ತಿರಲಿಲ್ಲ.ಅಂತಹ ಸಮಯದಲ್ಲಿ ವಿವೇಕಾನಂದರು ನೀಡಿದ ಮಾರ್ಗದರ್ಶನ ಇಂದಿಗೂ ದಾರಿ ದೀಪವಾಗಿದೆ. ಭಾರತೀಯರ ಸತ್ವ ಅಡಗಿರುವ ಆಧ್ಯಾತ್ಮಿಕತೆಗೆ ತಮ್ಮ ವಿಚಾರ ಧಾರೆಯನ್ನು ಮಿಳಿತಗೊಳಿಸಿ ಭಾರತೀಯ ಸಮಾಜವನ್ನು ಬದಲಾವಣೆ ಮಾಡಲು ವಿವೇಕಾನಂದರು ಬಯಸಿದರು.ವೈಜ್ಞಾನಿಕ ಪ್ರಜಾಪ್ರಭುತ್ವದ ಕಲ್ಪನೆಯಲ್ಲಿ ಜಾತಿ ಪದ್ಧತಿಯಿಂದ ಮುಕ್ತವಾದ ನವ ಭಾರತದ ನಿರ್ಮಾಣ ಮಾಡುವ ಕನಸು ಕಂಡಿದ್ದರು.ಆದ್ದರಿಂದಲೇ ಶತಮಾನಗಳಿಂದ ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದ,ಜೀವನದಲ್ಲಿ ನಂಬಿಕೆ ಕಳೆದುಕೊಂಡಿದ್ದ ಜನರಿಗೆ ಬದುಕಿನ ಮಾರ್ಗದ ಜೊತೆಯಲ್ಲಿಯೇ ಸ್ಫೂರ್ತಿಯ ಅಗತ್ಯವನ್ನು ಮನಗಂಡರು. ಈ ನೆಲೆಯಲ್ಲಿಯೇ ಜನರ ಬದುಕಿಗೆ ಬೇಕಾದ ಲೌಕಿಕ ಜ್ಞಾನದ ಜೊತೆಯಲ್ಲಿಯೇ ಆಧ್ಯಾತ್ಮಿಕ ಜ್ಞಾನವನ್ನು ನೀಡುವ ಸಂದೇಶಗಳನ್ನು ನೀಡಿದರು.ಇವೆರಡೂ ಸಾಧ್ಯವಾಗುವುದು ಶಿಕ್ಷಣದಿಂದ ಮಾತ್ರ ಸಾಧ್ಯ ಅದಕ್ಕಾಗಿಯೇ ಜನರ ಶಿಕ್ಷಣಕ್ಕೆ ಒತ್ತು ನೀಡಿದರು.

* 1893 ರಂದು ಚಿಕಾಗೋದಲ್ಲಿ ನಡೆದ ಧರ್ಮ ಸಂಸತ್ತಿನಲ್ಲಿ ಇವರು ಮಂಡಿಸಿದ ವಿಚಾರಗಳಿಂದ ಇಡೀ ಪ್ರಪಂಚವು ಭಾರತೀಯರನ್ನು ಗುರುತಿಸುವ ಹಾಗೂ ಗೌರವಿಸುವ ಹಾಗೆ ಮಾಡಿತು.

* ದೇಶದ ಸಾಮರ್ಥ್ಯ ಅಡಗಿರುವುದು ಯುವ ಜನತೆಯಲ್ಲಿ ಎಂದು ಮನಗಂಡು "ಏಳಿ ಎದ್ದೇಳಿ ಗುರಿ ಮುಟ್ಟುವ ವರೆಗೆ ನಿಲ್ಲದಿರಿ" ಎಂದು ನೀಡಿದ ಸಂದೇಶ ಮಲಗಿದ್ದ ಯುವ ಜನತೆಯನ್ನು ಬಡಿದೆಬ್ಬಿಸಿತು.ಯುವಕರ ಕ್ರಿಯಾಶೀಲ ಮನಕ್ಕೆ ಕೆಲಸ ಕೊಡುವ ಕಾರ್ಯ ಮಾಡಿ ದೇಶಾದ್ಯಂತ ಸಂಘಟನೆ ಮಾಡಿದರು.

* ಜನರ ಧಾರ್ಮಿಕ ಪ್ರಜ್ಞೆಯನ್ನು ಹುಟ್ಟುಹಾಕಲು ಮತ್ತು ಅವರ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಜನರಲ್ಲಿ ಹೆಮ್ಮೆ ಮೂಡಿಸುವ ಕಾರ್ಯ ಮಾಡಿದರು.

* ಭಾರತದಲ್ಲಿ ಬೇರೆ ಬೇರೆ ಪಂಥಗಳು ಇದ್ದರೂ ಎಲ್ಲದರ ಸಾಮಾನ್ಯ ನೆಲೆಗಳನ್ನು ಎತ್ತಿ ತೋರಿಸುವ ಮೂಲಕ ಹಿಂದೂ ಧರ್ಮದಲ್ಲಿ ಏಕೀಕರಣವನ್ನು ತರಲು ಶ್ರಮಿಸಿದರು.

* ದೇಶದಲ್ಲಿ ಇದ್ದ ದೀನ ದಲಿತರ ತಾರತಮ್ಯ ನಿವಾರಣೆಗೆ ಒತ್ತು ನೀಡಿದ್ದು ಅಲ್ಲದೆ ವಿದ್ಯಾವಂತರ ಗಮನವನ್ನು ಕೇಂದ್ರೀಕರಿಸಲು ಮತ್ತು ಪ್ರಾಯೋಗಿಕ ವೇದಾಂತದ ತತ್ವಗಳ ಅನ್ವಯದಿಂದ ಅವರ ಉನ್ನತಿಗಾಗಿ ತನ್ನ ಯೋಜನೆಯನ್ನು ವಿಸ್ತರಿಸಿದರು.

* ಧರ್ಮವು ವಿಜ್ಞಾನದಂತೆಯೇ ವೈಜ್ಞಾನಿಕವಾಗಿದೆ ಎಂದು ತೋರಿಸುವ ಮೂಲಕ ವಿವೇಕಾನಂದರು ಆಧುನಿಕ ವಿಜ್ಞಾನದ ಸವಾಲನ್ನು ಎದುರಿಸಿದರು.

* ಭಾರತೀಯ ಸಂಸ್ಕೃತಿ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ನಡುವೆ ಸೇತುವೆಯನ್ನು ನಿರ್ಮಿಸುವ ಕಾರ್ಯವನ್ನು ವಿವೇಕಾನಂದರು ಮಾಡಿದ್ದಾರೆ.ಪಾಶ್ಚಾತ್ಯರು ಹಿಂದೂ ಧರ್ಮವನ್ನು, ಆಧ್ಯಾತ್ಮಿಕ ತೆ ಹಾಗೂ ತತ್ವ ಶಾಸ್ತ್ರವನ್ನು ನೋಡುವ ದೃಷ್ಟಿಕೋನವನ್ನು ಬದಲಿಸಿದ್ದು ಅಲ್ಲದೆ ಅವರೂ ತಮ್ಮ ಬದುಕಿನಲ್ಲಿ ಅಳವಡಿಸುವ ಮನಸ್ಥಿತಿಯನ್ನು ಬದಲಾಯಿಸಿದರು.

ರಾಷ್ಟ್ರೀಯತೆ ಎಂಬುದು ಕೇವಲ ಸಿದ್ಧಾಂತಗಳು ಎಂಬ ಭಾವನೆಗೆ ಬದಲಾಗಿ ಬದುಕಿನ ಭಾವ ಎಂಬಂತೆ ಬದಲಾದದ್ದು ಸ್ವಾಮಿ ವಿವೇಕಾನಂದರಿಂದ. ಪ್ರತಿ ಭಾರತೀಯನ ಕಣ ಕಣಗಳಲ್ಲಿ ಭಾರತೀಯತೆ ಅಡಗಿದೆ.ತತ್ವ ಶಾಸ್ತ್ರ ಎಂಬುದು ಜೀವನದ ದೃಷ್ಟಿಕೋನ.ಅದಕ್ಕೆ ವೈಜ್ಞಾನಿಕ ಮನೋಭಾವದ ಲೇಪ ಬೆರೆಸಿ ಬದುಕಿನ ಮಾರ್ಗ ಎಂದು ತೋರಿಸಿದ್ದು ಸ್ವಾಮಿ ವಿವೇಕಾನಂದರು.ಇಂದಿಗೂ ಪಾಶ್ಚಾತ್ಯರ ದೃಷ್ಟಿಯಲ್ಲಿ ಭಾರತೀಯತೆ ಎಂಬುದು ಜೀವನ ಮಾರ್ಗ ಎಂಬ ಭಾವನೆ ಬದಲಾಗಿದ್ದೂ ಅಲ್ಲದೆ ಅವರೂ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ.

ಉನ್ನತ ಚಿಂತನೆ ಮತ್ತು ಸರಳ ಜೀವನ ಭಾರತೀಯರ ಸತ್ವ.ಇಂತಹ ಉದಾತ್ತ ಭಾವವನ್ನು ಭಾರತೀಯರು ಬದುಕಿನಲ್ಲಿ ಅಳವಡಿಸಿಕೊಳ್ಳುವಂತೆ ಮಾಡಿದ ದಾರ್ಶನಿಕರಾದ ವಿವೇಕಾನಂದರ ಬದುಕು ಅನುಕರಣೀಯ.ಇಂದಿನ ಬದಲಾಗುವ ವೈಜ್ಞಾನಿಕ ಯುಗದಲ್ಲಿಯೂ ಇವರ ಚಿಂತನೆಗಳು ಸಾರ್ವಕಾಲಿಕ.ಅಭಿವೃದ್ಧಿಯ ಹೆಸರಿನಲ್ಲಿ ಎಷ್ಟೇ ಬದಲಾದರೂ ಅಂದು ಅವರು ತೋರಿದ್ದ ಮಾರ್ಗ ದರ್ಶನ ಇಂದಿಗೂ ಪ್ರಸ್ತುತ ವಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಭಾರತೀಯರು ಜಾಗ್ರತೆಯಿಂದ ದೇಶದ ಗೌರವಕ್ಕೆ ಚ್ಯುತಿ ಬಾರದ ಹಾಗೆ ನಡೆದುಕೊಳ್ಳುವುದು ಜವಾಬ್ದಾರಿಯೇ ಸರಿ.

**ತ್ರಿನೇತ್ರಾನಂದ ಓ.**
**4ನೇ ಸೆಮಿಸ್ಟರ್, 3ವರ್ಷ ಎಲ್.ಎಲ್.ಬಿ.**



# ಸಾವರ್ಕರ್ ಕಂಡಂತೆ ಆತ್ಮನಿರ್ಭರ ಭಾರತ

ಜಯೋಸ್ತು ತೇ ಜಯೋಸ್ತು ತೇ
ಶ್ರೀ ಮಹಾಂಮಂಗಲೇ ಶಿವಾಸ್ಪದೇ ಶುಭತೇ
ಸ್ವತಂತ್ರತೇ ಭಗವತೀ ತ್ವಾಮಹಮ್ ಯಶೋಯುತಾಂ ವಂದೇ

ಸ್ವತಂತ್ರ ದೇವಿ ಸಾಕ್ಷಾತ್ ಆದಿ ಪರಾಶಕ್ತಿಯಾಗಿ ಸದಾ ಶುಭ ಮಂಗಳಗಳನ್ನು ನೀಡುವ ಭಾರತಮಾತೆಯೇ ನಿನಗಿದೋ ನಮನ ....

ಕ್ರಾಂತಿಕಾರಿಯಾಗಿ , ನಾಯಕನಾಗಿ, ಕವಿಯಾಗಿ , ಲೇಖಕನಾಗಿ, ಭಾಷಾ ತಜ್ಞನಾಗಿ, ಕರಿನೀರಿನ ಶಿಕ್ಷೆಗೆ ಒಳಗಾಗಿ , ಪ್ರಖರ ಹಿಂದುತ್ವವಾದಿಯಾಗಿ, ವ್ಯೂಹರಚನೆಕಾರನಾಗಿ, ಸಮಾಜಸುಧಾರಕನಾಗಿ ಹೀಗೆ ಹತ್ತು ಹಲವು ಬಹುಮುಖಿ , ಬಹುರಂಗೀ ವ್ಯಕ್ತಿತ್ವವನ್ನು ಹೊಂದಲು; ಎಲ್ಲಾ ಉತ್ತಮ , ಉದಾತ್ತ, ಉನ್ನತ ಹಾಗೂ ಮಹಾನ್ ಮಧುರವಾದ ಚಿಂತನೆಗಳೆಲ್ಲಾ ಹೇ ಭಾರತಮಾತೆ ನಿನ್ನೊಳಗೇ ಸೇರಿಕೊಂಡಿದೆ ಎಂಬುದಾಗಿ ಮಾತೃಭೂಮಿಯನ್ನು ಪೂಜನೆಗೈದ ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರ್ಕರ್ ಗೆ ಮಾತ್ರ ಸಾಧ್ಯ.

ಪರಕೀಯರ ಮೇಲೆ ಅವಲಂಭಿತರಾಗದೆ ರಾಷ್ಟ್ರವನ್ನು ತನ್ನ ಸ್ವಂತ ಬಲದ ಮೇಲೆ ಅಭ್ಯುದಯಗೊಳಿಸುವ ಸ್ವಾವಲಂಭನೆಯ ಪ್ರತೀಕವೇ ಆತ್ಮನಿರ್ಭರದ ತಾತ್ಪರ್ಯ. ಸಾವರ್ಕರ್ ಅವರ ಸಂಪೂರ್ಣ ಜೀವನವೇ ಆತ್ಮನಿರ್ಭರತೆಗೆ ಅರ್ಪಿತ. ಸ್ವಧರ್ಮ ಹಾಗೂ ಸ್ವರಾಜ್ಯದ ಪರಿಕಲ್ಪನೆಯನ್ನು ತಮ್ಮ 16 ವಯಸ್ಸು ಅರ್ಥಾತ್ ಕಾಂಗ್ರೆಸ್ ನ ಪೂರ್ಣಸ್ವರಾಜ್ಯದ ಕಲ್ಪನೆ ಹುಟ್ಟುವ ಎರಡು ದಶಕಗಳ ಮೊದಲೇ ಸಾವರ್ಕರ್ ಭಾರತವನ್ನು ಸ್ವಾವಲಂಭಿ ಆತ್ಮನಿರ್ಭರಗೊಳಿಸಲು ಹೋರಾಟ ಪ್ರಾರಂಭಿಸಿದ್ದರು.

ಸಾವರ್ಕರ್ ಅವರ ಜೀವನದ ಹಲವು ಮಜಲುಗಳು ಹಾಗೂ ಅದರಿಂದ ಆತ್ಮನಿರ್ಭರತೆಗೆ ಕೊಡುಗೆಯನ್ನು ವಿಸ್ತೃತವಾಗಿ ತಿಳಿಯೋಣ.

* ಕ್ರಾಂತಿಕಾರಿ ಚಟುವಟಿಕೆ ಹಾಗೂ ಸ್ವದೇಶಿ ಆಂದೋಲನದ ಮೂಲಕ ಆತ್ಮನಿರ್ಭರತೆ " ಸುಮ್ಮನೆ ಕುಳಿತುಕೊಂಡರೆ , ದಾಸ್ಯದ ನೊಗ ಕಳಚದು, ಬಂದೂಕು ಹಿಡಿ , ನೀನು ಎದ್ದಿರುವ ಸದ್ದು ಕೇಳಿದರೆ ಸಾಕು , ಶತ್ರು ಪರಾರಿಯಾಗಬೇಕು " ಅತ್ಯಾಚಾರಿ , ಕ್ರೂರ , ನೃಶಂಸ ಸಾಮ್ರಾಜ್ಯವಾದಿ ಪರಕೀಯರನ್ನು ದೇಶದಿಂದ ಓಡಿಸಿ , ಭಾರತವನ್ನು ಸ್ವತಂತ್ರ ಪ್ರಭುತ್ವ ದೇಶವನ್ನಾಗಿ ಮಾಡುವ ಅಸಿಧಾರಾವ್ರತವನ್ನು ತಾಳಿ , ಭಾರತೀಯರಲ್ಲಿ ಮೂಡಿದ್ದ ವಿಸ್ಮೃತಿ ಹಾಗೂ ಆತ್ಮಗ್ಲಾನಿಯನ್ನು ಹೋಗಲಾಡಿಸಿ, ಅಂತರ್ಧ್ವನಿಯಲ್ಲಿ ಸ್ವಾಭಿಮಾನವನ್ನು ಜಜ್ವಾಲ್ಯಮಾನವಾಗಿ ಉದ್ದೀಪನಗೊಳಿಸಿದ ಖ್ಯಾತಿ ವೀರ ಸಾವರ್ಕರ್ ಅವರದ್ದು. ಸ್ವಾತಂತ್ರ್ಯಗೊಳಿಸಲು ಶಶಸ್ತ್ರ ಕ್ರಾಂತಿ ಒಂದೇ ಮಾರ್ಗ ಎನ್ನುವುದನ್ನು ಮನಗಂಡು ಸಾವರ್ಕರ್ ತಾವು ಬಾಲಕನಾಗಿರುವಾಗಲೇ ನಾಸಿಕ್ನಲ್ಲಿ " ರಾಷ್ಟ್ರ ಭಕ್ತ ಸಮೂಹ" ಎನ್ನುವ ಭಾರತದ ಮೊದಲ ರಹಸ್ಯ ಕ್ರಾಂತಿಕಾರಿ ಸಂಘಟನೆಯನ್ನು ಅಸ್ತಿತ್ವಕ್ಕೆ ತರುತ್ತಾರೆ. ರಾಷ್ಟ್ರ ಭಕ್ತ ಸಮೂಹವು ಹಿನ್ನಲೆಯಲ್ಲಿ ರಹಸ್ಯ ಕ್ರಾಂತಿಕಾರಿ ಕೆಲಸಗಳನ್ನು ನಡೆಸಿದರೆ " ಮಿತ್ರಮೇಳ"ವು ಮುನ್ನಲೆಯಲ್ಲಿ ಸ್ವದೇಶಿ ಆಂದೋಲನಗಳೆಂಬ ರಾಷ್ಟ್ರದ ಪ್ರಸ್ತುತ ಹೋರಾಟಗಳಿಗೆ ಬೆಂಬಲ ನೀಡಿ ಕೆಲಸ ಮಾಡುತ್ತಿತ್ತು. ಬಾಹ್ಯದಲ್ಲಿ ಎರಡು ಸಂಘಟನೆ ಆದರೆ ಆಂತರ್ಯದಲ್ಲಿ ಏಕಮೇವ ಸಾಧನೆಯ ಒಂದೇ ಸಂಘಟನೆ .ಮಿತ್ರಮೇಳವು ರಹಸ್ಯವಾಗಿ ಮುನ್ನಲೆಯ ಸ್ವಾತಂತ್ರ್ಯ ಹೋರಾಟಗಾರಿಗೆ ನೈತಿಕ ಬೆಂಬಲವನ್ನು ನೀಡಿತ್ತು. ಕರಪತ್ರ ಹಂಚುವುದು, ಗೋಡೆಗಳಲ್ಲಿ ಬ್ರಿಟೀಷ್ ವಿರೋಧಿ ಪತ್ರಗಳನ್ನು ಅಂಟಿಸುವುದು ಇತ್ಯಾದಿ ರಹಸ್ಯ ಕಾರ್ಯಗಳನ್ನು ಸಾವರ್ಕರ್ ಸಂಘಟಿಸಿದರು.

ಮಿತ್ರಮೇಳವು ಹಾಗೂ ರಾಷ್ಟ್ರ ಭಕ್ತ ಸಮೂಹವು ಎರಡು ವರ್ಷಗಲ್ಲಿ ಒಂದು ಕ್ರಾಂತಿಕಾರಿ ಸಂಘಟನೆಯಾಗಿ ಬೆಳೆಯಲು ಬೇಕಾದ ಅನುಶಾಸನ ಹಾಗೂ ಕಟ್ಟುನಿಟ್ಟಾದ ಅಲಿಖಿತ ನಿಯಮಗಳ ಮೂಲಕ ಸಾಧಿಸಿತ್ತು. ನಾಸಿಕ್ ನಿಂದ ಹೆಚ್ಚಿನ ಓದಿಗೋಸ್ಕರ ಸಾವರ್ಕರ್  ಪುಣೆಯ ಫರ್ಗ್ಯೂಸನ್ ಕಾಲೇಜಿಗೆ ಹೋದರು. 1904ರ ಹೊತ್ತಿಗೆ ಮಿತ್ರಮೇಳವು ತನ್ನ ಪ್ರಥಮ ಅಧಿವೇಶನ ನಡೆಸಿ , ಮಿತ್ರಮೇಳ ಸಂಘಟನೆಯ ಹೆಸರನ್ನು ' ಅಭಿನವ ಭಾರತ ' ಎಂಬುದಾಗಿ ಬದಲಿಸಿದರು. 1905 ರ ಹೊತ್ತಿಗಾಗಲೇ ಬಂಗಾಳದ ವಿಭಜನೆಯ ಕಿಚ್ಚು ದೇಶವ್ಯಾಪಿ ಹರಡಿತ್ತು. ಸ್ವದೇಶಿ ಆಂದೋಲನ , ವಂದೇ ಮಾತರಂ ಘೋಷಗಳು ದೇಶದ ಮೂಲೆ ಮೂಲೆಯಲ್ಲೂ ಕಾಡ್ಗಿಚ್ಚಿನಂತೆ ಹರಡಿತು. ಅಭಿನವ ಭಾರತ ಮೂಲಕ ಅಸಂಖ್ಯಾತ ಕ್ರಾಂತಿಕಾರಿಗಳ ನಿರ್ಮಾಣ ಮಾಡುವ ಕೆಲಸಕ್ಕೆ ಮುನ್ನಡಿ ಇಟ್ಟರು. ವಿದೇಶಿ ಬಹಿಷ್ಕಾರ ಹಾಗೂ ಸ್ವದೇಶಿ ಪ್ರೋತ್ಸಾಹದ ಮೂಲಕ ಪುಣೆಯಾದ್ಯಂತ ಸ್ವಾತಂತ್ರ್ಯದ ಕಿಡಿಯನ್ನು ಹಚ್ಚಿದರು . ಅಷ್ಟು ಹೊತ್ತಿಗಾಗಲೇ ಸಾವರ್ಕರ್ ಅವರು ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗಿದ್ದರು.

ಶ್ಯಾಮಾಜೀ ಕೃಷ್ಣವರ್ಮರ ವಿದ್ಯಾರ್ಥಿ ವೇತನ ಪಡೆದು ಸಾವರ್ಕರ್ ಲಂಡನ್ ಗೆ ಉನ್ನತ ವ್ಯಾಸಂಗಕ್ಕೆ ತೆರಳುತ್ತಾರೆ . ಶ್ಯಾಮಾಜೀ ಕೃಷ್ಣವರ್ಮರು ನಡೆಸುತ್ತಿದ್ದ ಇಂಡಿಯಾ ಹೌಸ್ ನಲ್ಲಿ  ಆಶ್ರಯ ಪಡೆದ ನಂತರ ಸಾವರ್ಕರ್ ಅವರ ಸ್ವಾತಂತ್ರ್ಯ ಕ್ರಾಂತಿಯ ವೇಗವು ಹೆಚ್ಚಿ  ಉಚ್ಛ್ರಾಯ ಸ್ಥಿತಿಗೆ ಏರಿತು.  ಭಾರತದಲ್ಲಿದ್ದಾಗ ಕಟ್ಟಿದ ಅಭಿನವ ಭಾರತ ರಹಸ್ಯ ಕ್ರಾಂತಿಕಾರಿ ಸಂಘಟನೆಯನ್ನು ಇಂಗ್ಲೆಂಡ್ನಲ್ಲೂ ವಿಸ್ತರಿಸುವ ಉದ್ದೇಶದಿಂದ ' ಫ್ರೀ ಇಂಡಿಯಾ ಸೊಸೈಟಿ 'ಯನ್ನು ಸ್ಥಾಪಿಸಿದರು. ಇಂಡಿಯಾ ಹೌಸ್ ನಲ್ಲಿ ವಾರಾಂತ್ಯದಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಭಾಗವಹಿಸುತ್ತಾ , ಸಾವರ್ಕರ್ ಅವರು ಕ್ಷಿಪ್ರಗತಿಯ ವಾಗ್ಝರಿಯನ್ನು ಹರಿಸುತ್ತಾ ಎಲ್ಲರ ಗಮನ ಸೆಳೆಯುತ್ತಾ ಕೊನೆಗೆ ಚರ್ಚೆಗಳ ಸಂಪೂರ್ಣ ಹಿಡಿತ ಸಾಧಿಸಿದರು.ಚರ್ಚೆಗಳನ್ನು ದೇಶದ ಸ್ವಾತಂತ್ರ್ಯಕ್ಕೆ ಬೇಕಾದ ಉಪಯುಕ್ತ ಮಾಹಿತಿಗಳ ಹೂರಣವನ್ನಾಗಿಸಿದರು ಸಾವರ್ಕರ್. ಮಹಾತ್ಮ ಗಾಂಧೀಜಿ ಕೂಡ ಲಂಡನ್ ನಲ್ಲಿ ಇದ್ದಾಗ ಈ ಚರ್ಚಾ ಕೂಟದಲ್ಲಿ ಭಾಗವಹಿಸಿದ್ದರು. ರಷ್ಯಾದ ಕ್ರಾಂತಿಕಾರಿ ಲೆನಿನ್ ಅನ್ನು ಭಾಷಣಕ್ಕೆ ಇಂಡಿಯಾ ಹೌಸ್ಗೆ ಸಾವರ್ಕರ್ ಕರೆಸಿದ್ದರು .  ದೇಸಾಯಿ ಎನ್ನುವ ಭಾರತೀಯ ವಿದ್ಯಾರ್ಥಿಯ ಮೂಲಕ ' ಬಾಂಬ್ ತಯಾರಿಕೆ ಹೇಗೆ' ಎನ್ನುವ ವಿಷಯದ ಮೇಲೆ ಭಾಷಣ ನೀಡಿದ. ಕಾಲಕ್ರಮೇಣ ಈ ಚರ್ಚೆಗಳ ಪ್ರಭಾವದಿಂದ ಕ್ರಾಂತಿಕಾರಿಗಳಾದ  ಪಿ.ಎಂ.ಬಾಪಟ್ , ಹೇಮಚಂದ್ರ ಹಾಗೂ ಹೋತೇಲಾಲ್ ವರ್ಮ ಅವರು  ಸೇರಿಕೊಂಡು ರಷ್ಯನ್ ಭಾಷೆವಲ್ಲಿದ್ದ ಬಾಂಬ್ ತಯಾರಿಕೆಯ ಕೈಪಿಡಿಯನ್ನು ಇಂಗ್ಲಿಷ್ಗೆ  ಭಾಷಾಂತರಗೊಳಿಸಿ ಭಾರತಕ್ಕೆ ತಲುಪಿಸಿದರು. ಈ ಕೈಪಿಡಿಯ  ಪರಿಣಾಮ ಬಂಗಾಳದ ಕ್ರಾಂತಿಕಾರಿ ಸಂಘಟನೆ ಅನುಶೀಲನ ಸಮಿತಿಯ  ಹದಿನೆಂಟು ವರುಷದ ತರುಣ ಖುದೀರಾಮ್ ಬೋಸ್ 1907ರಲ್ಲಿ ಬಾಂಬ್ ದಾಳಿ ನಡೆಸಿ ಎರಡು ಬ್ರಿಟೀಷ್ ಮಹಿಳೆಯರನ್ನು ಬಲಿ ತೆಗೆದುಕೊಂಡ.

1907 ರಲ್ಲಿ ಸಾವರ್ಕರ್ ತಯಾರಿಸಿದ ತ್ರಿವರ್ಣ ಮತ್ತು ಮಧ್ಯದಲ್ಲಿ ವಂದೇ ಮಾತರಾಂ ಒಳಗೊಂಡಂತಹಾ ಭಾರತದ ಧ್ವಜವನ್ನು ಮೇಡಂ ಭಿಕಾಜಿ ಕಾಮಾ ಅವರು ಜರ್ಮನಿಯಲ್ಲಿ ಪ್ರಪ್ರಥಮ ಬಾರಿಗೆ ಧ್ವಜರೋಹಣ ಮಾಡಿದರು. 1909ರಲ್ಲಿ ಸಾವರ್ಕರ್ ಅವರ ಪ್ರೇರಣೆಯಿಂದಾಗಿ ಶೋಕಿಲಾಲನಾಗಿದ್ದ ಮದನ್ ಲಾಲ್ ಧೀಂಗ್ರಾ ಅವನು ಕ್ರಾಂತಿಕಾರಿಯಾಗಿ ಮಾರ್ಪಟ್ಟು ಕ್ರೂರ ಬ್ರಿಟೀಷ್ ಅಧಿಕಾರಿ ಕರ್ಝನ್ ವೇಯ್ಲಿಯನ್ನು ಗುಂಡಿಕ್ಕಿ ಕೊಂದನು . ತನ್ನ ಕೊನೆಯ ವಾಕ್ಯಗಳನ್ನು ಸಾವರ್ಕರ್ ತಿಳಿಸಿದಂತೆ ನುಡಿದನು ಹಾಗೂ ಸಾವರ್ಕರ್ ಅವರು ಈ ವಾಕ್ಯಗಳನ್ನು ಅಂದಿನ ದಿನಪತ್ರಿಕೆಗಳಲ್ಲಿ ಗುಟ್ಟಾಗಿ ಮುದ್ರಿಸಿದರು. ಅದೇ ಸಮಯದಲ್ಲಿ ಕ್ರಾಂತಿಕಾರಿ ಅನಂತ ಕನ್ಹರೇ ನಾಸಿಕ್ ನ ಜಿಲ್ಲಾಧಿಕಾರಿ ಜಾಕ್ಸನ್ನನ್ನು ಕೊಂದನು.

ಸಾವರ್ಕರ್ ಅವರು ಲಂಡನ್ ನಲ್ಲಿಯೇ ಕುಳಿತು ವ್ಯವಸ್ಥಿತವಾಗಿ ಸಂಚು ರೂಪಿಸಿ ಭಾರತದ ಕ್ರಾಂತಿಕಾರಿಗಳಿಗೆ ಫ್ರೆಂಚ್ ಆಡಳಿತಕ್ಕೆ ಒಳಪಟ್ಟ ಪುದುಚೇರಿ ಹಾಗೂ ಪೋರ್ಚುಗೀಸರ ಆಡಳಿತಕ್ಕೆ ಒಳಪಟ್ಟ ಗೋವಾ ಮೂಲಕ ಬ್ರೌನಿಂಗ್ ಕಂಪನಿಯ ಸ್ವಯಂಚಾಲಿತ ಪಿಸ್ತೂಲನ್ನು ತಲುಪಿಸುತ್ತಿದ್ದರು. 1907ಕ್ಕೆ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದು ಸ್ವರ್ಣಮಹೋತ್ಸವದ ವರ್ಷದಲ್ಲಿ , ಸಾವೇಕರ್ ಲಂಡನ್ ನಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಿಗೆ ನಿಧಿಸಮರ್ಪಣೆ ಹಾಗೂ 1859ರ ಹೋರಾಟದ ಸಂಸ್ಮರಣಾ ಕಾರ್ಯಕ್ರಮವನ್ನು ಅಯೋಜಿಸಿದರು. ಭಾರತೀಯ ವಿದ್ಯಾರ್ಥಿಗಳೆಲ್ಲಾ 1857ರ ಹೋರಾಟದ ಬ್ಯಾಡ್ಜ್ ಗಳನ್ನು ಧರಿಸಿ ಕಾಲೇಜಿಗೆ ಹೋಗಲಾರಂಭಿಸಿದರು. ಬ್ರಿಟೀಷರು ಇಂಡಿಯಾ ಹೌಸ್ ಕುರಿತು ' ಭಾರತದ ಹೊರಗೆ ಸಕ್ರೀಯವಾಗಿದ್ದ ಅತ್ಯಂತ ಅಪಯಾಕಾರಿ ಸಂಘಟನೆ ' ಅನ್ನುವುದಾಗು ಬರೆಯಲು ಸಾವರ್ಕರ್ ಅವರೇ ಕಾರಣವಲ್ಲವೇ ! . ಹೀಗೆ ಬ್ರಿಟೀಷರ ನೆಲದಲ್ಲಿಯೇ ಅವರ ವಿರುದ್ಧ ವಿವಿಧ ಸ್ತರಗಳಲ್ಲಿ ಬಾಂಬು ನಿರ್ಮಾಣ , ಪಿಸ್ತೂಲ್ ಇತ್ಯಾದಿ ಶಾಸ್ತ್ರಗಳ ನೀಡುವಿಕೆ , ಕ್ರಾಂತಿಕಾರಿಗಳನ್ನು ಮೃಗಸ್ವರೂಪಿ ಇಂಗ್ಲಿಷ್ ಅಧಿಕಾರಿಗಳನ್ನು ಹತ್ಯೆಗೈಯ್ಯಲು ಪ್ರೇರೇಪಣೆ ಇತ್ಯಾದಿ ರೀತಿಯಲ್ಲಿ ಕ್ರಾಂತಿಯನ್ನು ಸಂಘಟಿಸಿ ಸ್ವಾತಂತ್ರ್ಯ ಹೋರಾಟವನ್ನು ಭಾರತ ತನ್ನ ಸ್ವಾವಲಂಭನೆಯ ಮೂಲಕವೇ ಗಳಿಸಲು ಸಾವರ್ಕರ್ ಅವರು ಭಾರತದಲಿದ್ದು ಹಾಗೂ ಲಂಡನ್ ನಲ್ಲಿದ್ದು ಸಂಘಟಿಸಿದರು.

* ಇತಿಹಾಸದ ವಿಸ್ಮೃತಿಯನ್ನು ಹೋಗಲಾಡಿಸುವ ಆತ್ಮನಿರ್ಭರತೆ

ಕ್ರಾಂತಿಯು ಪಿಸ್ತೂಲ್ನ ಕಡತೂಸಿಗಿಂತಲೂ ಪೆನ್ನಿನ ಶಾಯಿ ಹಾಗೂ ಖಡ್ಗದ ಮೊನಚಿಗಿಂತಲು ಲೇಖನಿಯ ಅಂಚಿನಲ್ಲಿ ಸಂಘಟಿಸಿದ ಉದಾತ್ತ ಹಾಗೂ ಉನ್ನತ ಉದಾಹರಣೆ ಸ್ವಾತಂತ್ರ್ಯವೀರ ಸಾವರ್ಕರ್ ಅವರದ್ದು. ಯಾವ ಶ್ರೇಷ್ಠ ಕ್ಷಾತ್ರತೇಜಸ್ಸಿನಿಂದ ಭಾರತವನ್ನು ನಮ್ಮ ಸ್ವಾತಂತ್ರ್ಯವೀರರು ಸಂರಕ್ಷಿಸಿದ್ದರೋ ಅದನ್ನು ಬ್ರಿಟಿಷ್ ಇತಿಹಾಸಗಾರರ ಮೂಲಕ ಮರೆಮಾಚಿ , ಬೌದ್ಧಿಕ ವಿಸ್ಮೃತಿಗೆ ನೂಕಿ , ಭಾರತೀಯರನ್ನು ನಪುಂಸಕರನಾಗಿಸಿದ್ದರು. ಈ ವಿಸ್ಮೃತಿಯನ್ನು ಹೋಗಲಾಡಿಸಿ ಭಾರತೀಯರಿಗೆ ತನ್ನ ನಿಜ ಸ್ವರ್ಣೋತ್ತಮ ಇತಿಹಾಸದ ಪರಿಚಯವನ್ನು ತನ್ನ ಗ್ರಂಥಗಳ ಮೂಲಕ ಮಾಡಿದವರು ಸಾವರ್ಕರ್ .

1906 ರಲ್ಲಿ ಲಂಡನ್ ಗೆ ಬಂದ ಮೂರೇ ತಿಂಗಳಲ್ಲಿ ಕ್ರಾಂತಿಕಾರಿಗಳ ಪಾಲಿಗೆ ಪ್ರೇರಣೆ ಆದಂತಹ ಇಟಲಿಯ ಮಹಾನ್ ಕ್ರಾಂತಿಕಾರಿ ಮ್ಯಾಜನಿಯ ಆತ್ಮಕತೆಯನ್ನು ಮರಾಠಿಗೆ ಅನುವಾದಿಸಿ , ಸ್ವತಃ ಸಾವರ್ಕರ್ ಅವರೇ ಪ್ರಗಲ್ಭ ಮುನ್ನಡಿಯನ್ನು ಬರೆದು ಪ್ರಕಟಿಸಿದರು. ಭಾರತದಲ್ಲಿ ಅತೀ ಕಡಿಮೆ ಸಮಯದಲ್ಲಿ ಕಟ್ಟುನಿಟ್ಟಿನ ಬಿಗಿನಿಯಮಗಳ ಹೊರತಾಗಿಯೂ 2000 ಪ್ರತಿ ಮರಾಟವಾದವು. ಮ್ಯಾಜನಿಯ ಮೂಲಕ ಪರೋಕ್ಷವಾಗಿ ಭಾರತೀಯ ಕ್ರಾಂತಿಕಾರಿಗಳಿಗೆ ಪ್ರೇರಣೆ ನೀಡಿದರು. 1907ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ವರ್ಣಮಹೋತ್ಸವದ ಸಂಭ್ರಮದ ಸಮಯದಲ್ಲಿ , ಈ ಸಂಗ್ರಾಮವನ್ನು ದಂಗೆ , ಮಾರಣಹೋಮ ಎನ್ನುವುದಾಗಿ ವಿಶ್ಲೇಷಿಸಿ ಬರೆದ ಬ್ರಿಟೀಷ್ ಇತಿಹಾಸಕಾರರ ವಿರುದ್ಧವಾಗಿ ನಿಜವಾದ ಸತ್ಯ ಘಟನೆಯನ್ನು ಭಾರತೀಯ ದೃಷ್ಟಿಕೋನದಿಂದ ಕಟ್ಟಿಕೊಡುವ ಜರೂರನ್ನು ಸಾವರ್ಕರ್ ಮನಗಂಡರು. ಇದಕ್ಕಾಗಿ ' ಇಂಡಿಯಾ ಆಫೀಸ್ ಲೈಬ್ರರಿ' ಯಲ್ಲಿ ಒಂದು ವರ್ಷ ಕಳೆದು , ಬೇಕಾದ ಮಾಹಿತಿಯನ್ನು ಕಲೆಹಾಕಿ ' ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ' ಎನ್ನುವ ಕೃತಿಯನ್ನು ಬರೆದರು. ಗುಪ್ತಚರರ ಮೂಲಕ ಈ ಪ್ರತಿಯನ್ನು ಪಡೆದ ಬ್ರಿಟೀಷರು ಈ ಕೃತಿಯ ಮಹತ್ವವನ್ನು ಮನಗಂಡು , ಈ ಕೃತಿಯ ಕಾರಣ ನಡೆಯಬಹುದಾದ ದೊಡ್ಡ ಕ್ರಾಂತಿಯನ್ನು ತಪ್ಪಿಸಲು ಕಸ್ಟಮ್ಸ್ ಕಾಯ್ದೆಯ ಅಡಿಯಲ್ಲಿ ಭಾರತದಲ್ಲಿ ನಿಷೇಧಿಸಿದರು. ಪ್ರಕಟಣೆಗೆ ಮುನ್ನವೇ ಎರಡು ರಾಷ್ಟಗಳಲ್ಲಿ ನಿಷೇಧಕ್ಕೆ ಒಳಪಟ್ಟ ಕೃತಿಯಿದು. 1909ರಲ್ಲಿ ಹಾಲೆಂಡ್ ನಲ್ಲಿ ಮುದ್ರಿಸಿ , ಕಟ್ಟೆಚ್ಚರದಿಂದ ಗುಪ್ತವಾಗಿ ಭಾರತಕ್ಕೆ ತಲುಪಿತು ಈ ಕೃತಿ. ಅನಂತರ ನಡೆದದೆಲ್ಲಾ ಇತಿಹಾಸ. ಬೌದ್ಧಿಕ ವಿಸ್ಮೃತಿ ಜಾರಿದ್ದ ಭಾರತದ ಪ್ರತಿ ಮನೆಮನಗಳಲ್ಲೂ 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಪುಸ್ತಕ ತುಂಬಿತು , ಕ್ರಾಂತಿಕಾರಿಗಳ ಪೂಜ್ಯ ಗ್ರಂಥವಾಯಿತು. ಮುಂದೆ ಭಗತ್ ಸಿಂಗ್ ಈ ಕೃತಿಯನ್ನು ಮರುಮುದ್ರಣ ಮಾಡಿ

ಕ್ರಾಂತಿಕಾರಿಗಳಿಗೆ ಹಂಚಿದ್ದ. ಅದೇ ರೀತಿಯಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ತಮ್ಮ ಆಜಾದ್ ಹಿಂದ್ ಫೌಜ್ ನ ಪ್ರತಿಯೊಬ್ಬ ಸೈನಿಕನಿಗೂ ಈ ಕೃತಿಯನ್ನು ಗ್ರಂಥದಂತೆ ನೀಡಿದ್ದರು. " ಭಾರತೀಯ ಇತಿಹಾಸದ ಆರು ಸ್ವರ್ಣ ಯುಗಗಳು" ಎನ್ನುವ ಕೃತಿಯ ಮೂಲಕ ಭಾರತೀಯಲ್ಲಿ ಭಾರತವು ಕಂಡಂತಹ ಆರು ಮುಖ್ಯ ಇತಿಹಾಸದ ಕಾಲಗಟ್ಟಗಳು – ಚಂದ್ರಗುಪ್ತ ಮೌರ್ಯನ ಕಾಲ, ಪುಷ್ಯಮಿತ್ರ ಶುಂಗನ ಕಾಲ, ಚಂದ್ರಗುಪ್ತನ ಕಾಲ , ಯಶೋಧರ್ಮನ ಕಾಲ , ಮರಾಠರ ಕಾಲ ಹಾಗೂ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲಗಳನ್ನು ವಿವರಿಸಿ ನಾವು ಯಾರಿಗೂ ಕಮ್ಮಿ ಇಲ್ಲವೆಂಬುದನ್ನು ಸ್ಪಷ್ಟ ನುಡಿಗಳಲ್ಲಿ ನುಡಿದರು. ಇಲ್ಲಿ ಉಲ್ಲೇಖ ಮಾಡಿರುವುದು ಕೇವಲ 3 ಕೃತಿ ಮಾತ್ರ ಆದರೆ ಅಸಂಖ್ಯಾತ ಪುಸ್ತಕ ಹಾಗೂ ಕವಿತೆಗಳ ನಿರ್ಮಾತೃವಾಗಿ ಸಾವರ್ಕರ್ ಕ್ರಾಂತಿಯನ್ನು ಭಾರತೀಯರ ಆತ್ಮಗೌರವ , ಆತ್ಮಶಕ್ತಿ ಹಾಗೂ ಆತ್ಮನಿರ್ಭರತೆಯ ಆಧಾರದ ಮೇಲೆ ಉದ್ದೀಪನಗೊಳಿಸಿ ಅಷ್ಟಭುಜ ಸ್ವಾತಂತ್ರ್ಯಲಕ್ಷ್ಮಿಯನ್ನು ಉತ್ತುಂಗಕ್ಕೆ ತೆಗೆದುಕೊಂಡು ಹೋಗಿ ಸಿದ್ಧಗೊಳಿಸಿದರು.

* ಇತಿಹಾಸದ ವಿಸ್ಮೃತಿಯನ್ನು ಹೋಗಲಾಡಿಸುವ ಆತ್ಮನಿರ್ಭರತೆ

ಕ್ರಾಂತಿಯು ಪಿಸ್ತೂಲ್ನ ಕಡತೂಸಿಗಿಂತಲೂ ಪೆನ್ನಿನ ಶಾಯಿ ಹಾಗೂ ಖಡ್ಗದ ಮೊನಚಿಗಿಂತಲು ಲೇಖನಿಯ ಅಂಚಿನಲ್ಲಿ ಸಂಘಟಿಸಿದ ಉದಾತ್ತ ಹಾಗೂ ಉನ್ನತ ಉದಾಹರಣೆ ಸ್ವಾತಂತ್ರ್ಯವೀರ ಸಾವರ್ಕರ್ ಅವರದ್ದು. ಯಾವ ಶ್ರೇಷ್ಠ ಕ್ಷಾತ್ರತೇಜಸ್ಸಿನಿಂದ ಭಾರತವನ್ನು ನಮ್ಮ ಸ್ವಾತಂತ್ರ್ಯವೀರರು ಸಂರಕ್ಷಿಸಿದ್ದರೋ ಅದನ್ನು ಬ್ರಿಟಿಷ್ ಇತಿಹಾಸಗಾರರ ಮೂಲಕ ಮರೆಮಾಚಿ , ಬೌದ್ಧಿಕ ವಿಸ್ಮೃತಿಗೆ ನೂಕಿ , ಭಾರತೀಯರನ್ನು ನಪುಂಸಕರನಾಗಿಸಿದ್ದರು. ಈ ವಿಸ್ಮೃತಿಯನ್ನು ಹೋಗಲಾಡಿಸಿ ಭಾರತೀಯರಿಗೆ ತನ್ನ ನಿಜ ಸ್ವರ್ಣೋತ್ತಮ ಇತಿಹಾಸದ ಪರಿಚಯವನ್ನು ತನ್ನ ಗ್ರಂಥಗಳ ಮೂಲಕ ಮಾಡಿದವರು ಸಾವರ್ಕರ್ .

1906 ರಲ್ಲಿ ಲಂಡನ್ ಗೆ ಬಂದ ಮೂರೇ ತಿಂಗಳಲ್ಲಿ ಕ್ರಾಂತಿಕಾರಿಗಳ ಪಾಲಿಗೆ ಪ್ರೇರಣೆ ಆದಂತಹ ಇಟಲಿಯ ಮಹಾನ್ ಕ್ರಾಂತಿಕಾರಿ ಮ್ಯಾಜನಿಯ ಆತ್ಮಕತೆಯನ್ನು ಮರಾಠಿಗೆ ಅನುವಾದಿಸಿ , ಸ್ವತಃ ಸಾವರ್ಕರ್ ಅವರೇ ಪ್ರಗಲ್ಭ ಮುನ್ನುಡಿಯನ್ನು ಬರೆದು ಪ್ರಕಟಿಸಿದರು. ಭಾರತದಲ್ಲಿ ಅತೀ ಕಡಿಮೆ ಸಮಯದಲ್ಲಿ ಕಟ್ಟುನಿಟ್ಟಿನ ಬಿಗಿನಿಯಮಗಳ ಹೊರತಾಗಿಯೂ 2000 ಪ್ರತಿ ಮರಾಟವಾದವು. ಮ್ಯಾಜನಿಯ ಮೂಲಕ ಪರೋಕ್ಷವಾಗಿ ಭಾರತೀಯ ಕ್ರಾಂತಿಕಾರಿಗಳಿಗೆ ಪ್ರೇರಣೆ ನೀಡಿದರು. 1907ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ವರ್ಣಮಹೋತ್ಸವದ ಸಂಭ್ರಮದ ಸಮಯದಲ್ಲಿ , ಈ ಸಂಗ್ರಾಮವನ್ನು ದಂಗೆ , ಮಾರಣಹೋಮ ಎನ್ನುವುದಾಗಿ ವಿಶ್ಲೇಷಿಸಿ ಬರೆದ ಬ್ರಿಟೀಷ್ ಇತಿಹಾಸಕಾರರ ವಿರುದ್ಧವಾಗಿ ನಿಜವಾದ ಸತ್ಯ ಘಟನೆಯನ್ನು ಭಾರತೀಯ ದೃಷ್ಟಿಕೋನದಿಂದ ಕಟ್ಟಿಕೊಡುವ ಜರೂರನ್ನು ಸಾವರ್ಕರ್ ಮನಗಂಡರು. ಇದಕ್ಕಾಗಿ ' ಇಂಡಿಯಾ ಆಫೀಸ್ ಲೈಬ್ರರಿ' ಯಲ್ಲಿ ಒಂದು ವರ್ಷ ಕಳೆದು , ಬೇಕಾದ ಮಾಹಿತಿಯನ್ನು ಕಲೆಹಾಕಿ ' ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ' ಎನ್ನುವ ಕೃತಿಯನ್ನು ಬರೆದರು. ಗುಪ್ತಚರರ ಮೂಲಕ ಈ ಪ್ರತಿಯನ್ನು ಪಡೆದ ಬ್ರಿಟೀಷರು ಈ ಕೃತಿಯ ಮಹತ್ವವನ್ನು ಮನಗಂಡು , ಈ ಕೃತಿಯ ಕಾರಣ ನಡೆಯಬಹುದಾದ ದೊಡ್ಡ ಕ್ರಾಂತಿಯನ್ನು ತಪ್ಪಿಸಲು ಕಸ್ಟಮ್ಸ್ ಕಾಯ್ದೆಯ ಅಡಿಯಲ್ಲಿ ಭಾರತದಲ್ಲಿ ನಿಷೇಧಿಸಿದರು. ಪ್ರಕಟಣೆಗೆ ಮುನ್ನವೇ ಎರಡು ರಾಷ್ಟ್ರಗಳಲ್ಲಿ ನಿಷೇಧಕ್ಕೆ ಒಳಪಟ್ಟ ಕೃತಿಯಿದು. 1909ರಲ್ಲಿ ಹಾಲೆಂಡ್ ನಲ್ಲಿ ಮುದ್ರಿಸಿ , ಕಟ್ಟೆಚ್ಚರದಿಂದ ಗುಪ್ತವಾಗಿ ಭಾರತಕ್ಕೆ ತಲುಪಿತು ಈ ಕೃತಿ. ಅನಂತರ ನಡೆದದೆಲ್ಲಾ ಇತಿಹಾಸ. ಬೌದ್ಧಿಕ ವಿಸ್ಮೃತಿ ಜಾರಿದ್ದ ಭಾರತದ ಪ್ರತಿ ಮನೆಮನಗಳಲ್ಲೂ 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಪುಸ್ತಕ ತುಂಬಿತು , ಕ್ರಾಂತಿಕಾರಿಗಳ ಪೂಜ್ಯ ಗ್ರಂಥವಾಯಿತು. ಮುಂದೆ ಭಗತ್ ಸಿಂಗ್ ಈ ಕೃತಿಯನ್ನು ಮರುಮುದ್ರಣ ಮಾಡಿ ಕ್ರಾಂತಿಕಾರಿಗಳಿಗೆ ಹಂಚಿದ್ದ. ಅದೇ ರೀತಿಯಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ತಮ್ಮ ಆಜಾದ್ ಹಿಂದ್ ಫೌಜ್ ನ ಪ್ರತಿಯೊಬ್ಬ ಸೈನಿಕನಿಗೂ ಈ ಕೃತಿಯನ್ನು ಗ್ರಂಥದಂತೆ ನೀಡಿದ್ದರು. " ಭಾರತೀಯ ಇತಿಹಾಸದ ಆರು ಸ್ವರ್ಣ ಯುಗಗಳು" ಎನ್ನುವ ಕೃತಿಯ ಮೂಲಕ ಭಾರತೀಯಲ್ಲಿ ಭಾರತವು ಕಂಡಂತಹ ಆರು ಮುಖ್ಯ ಇತಿಹಾಸದ ಕಾಲಗಟ್ಟಗಳು – ಚಂದ್ರಗುಪ್ತ ಮೌರ್ಯನ ಕಾಲ, ಪುಷ್ಯಮಿತ್ರ

ಶುಂಗನ ಕಾಲ, ಚಂದ್ರಗುಪ್ತನ ಕಾಲ , ಯಶೋಧರ್ಮನ ಕಾಲ , ಮರಾಠರ ಕಾಲ ಹಾಗೂ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲಗಳನ್ನು ವಿವರಿಸಿ ನಾವು ಯಾರಿಗೂ ಕಮ್ಮಿ ಇಲ್ಲವೆಂಬುದನ್ನು ಸ್ಪಷ್ಟ ನುಡಿಗಳಲ್ಲಿ ನುಡಿದರು. ಇಲ್ಲಿ ಉಲ್ಲೇಖ ಮಾಡಿರುವುದು ಕೇವಲ 3 ಕೃತಿ ಮಾತ್ರ ಆದರೆ ಅಸಂಖ್ಯಾತ ಪುಸ್ತಕ ಹಾಗೂ ಕವಿತೆಗಳ ನಿರ್ಮಾತೃವಾಗಿ ಸಾವರ್ಕರ್ ಕ್ರಾಂತಿಯನ್ನು ಭಾರತೀಯರ ಆತ್ಮಗೌರವ, ಆತ್ಮಶಕ್ತಿ ಹಾಗೂ ಆತ್ಮನಿರ್ಭರತೆಯ ಆಧಾರದ ಮೇಲೆ ಉದ್ದೀಪನಗೊಳಿಸಿ ಅಷ್ಟಭುಜ ಸ್ವಾತಂತ್ರ್ಯಲಕ್ಷ್ಮಿಯನ್ನು ಉತ್ತುಂಗಕ್ಕೆ ತೆಗೆದುಕೊಂಡು ಹೋಗಿ ಸಿದ್ಧಗೊಳಿಸಿದರು.

* ಹಿಂದುತ್ವದ ಮೂಲಕ ಆತ್ಮನಿರ್ಭರತೆ

ಸಾವರ್ಕರ್ ಹಿಂದುತ್ವಕ್ಕೊಂದು ವ್ಯಾಖ್ಯೆ ಕೊಡಬೇಕಾದ ಅಗತ್ಯತೆಯನ್ನು ಮನಗಂಡರು. ಜೊತೆಗೆ ಅವರು ಪ್ರತಿಪಾದಿಸಿ ಕಾರ್ಯಾಚರಿಸಿದ್ದು ಅಹಿಂದೂಗಳ ಶುದ್ಧೀಕರಣ, ಹಿಂದೂಗಳ ಸಂಘಟನೆ ಹಾಗೂ ಹಿಂದೂ ಸೈನಿಕೀಕರಣ ಎಂಬ ಮೂರು ಮುಖ್ಯ ಅಂಶಗಳು.

" ಆ ಸಿಂಧು ಸಿಂಧು ಪರ್ಯಂತ ಯಸ್ಯ ಭಾರತ ಭೂಮಿಕಾ।ಪಿತೃಭೂಃ ಪುಣ್ಯ ಭೂಶ್ಚೈವ ಸ ವೈ ಹಿಂದುರಿತಿಸ್ಮತಃ॥" ಸಿಂಧೂವಿನಿಂದ ಸಮುದ್ರದವರೆಗೆ ಚಾಚಿಕೊಂಡಿರುವ ಈ ಪವಿತ್ರ ಭರತ ಭೂಮಿಯನ್ನು ತನ್ನ ಪಿತೃ ಭೂಮಿಯಾಗಿ, ತನ್ನ ತವರನ್ನಾಗಿ ಯಾರು ಸ್ವೀಕರಿಸುತ್ತಾನೋ ಅವನೇ ಹಿಂದೂ.

ಜೈಲಿನಿಂದ ಬಂದು ರತ್ನಗಿರಿಯಲ್ಲಿ ಗೃಹಬಂಧನಕ್ಕೆ ಒಳಗಾಗಿ 13ವರ್ಷಗಳ ಕಾಲ ರಾಜಕೀಯ ಹಾಗೂ ಕ್ರಾಂತಿಯ ಕಾರ್ಯದಿಂದ ದೂರವಿದ್ದ ಸಾವರ್ಕರ್ ತಮ್ಮ ಸಂಪೂರ್ಣ ಧ್ಯಾನವನ್ನು ಭಾರತೀಯ ಸಮಾಜವನ್ನು ಸುಧಾರಣೆಗೊಳಿಸಿ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಜಾಗೃತಿಗೊಳಿಸುವ ಕಾರ್ಯಕ್ಕೆ ಕೈಹಾಕಿದರು. ಅದಾಗಲೇ ದೇಶದಾದ್ಯಂತ ಮುಸ್ಲಿಂಲೀಗ್ ಹಾಗೂ ಮುಸಲ್ಮಾನರ ಮತಾಂಧತೆ ತಾಂಡವವಾಡುತಿತ್ತು. ಮರುಮತಾಂತರ ಹಾಗೂ ಶುದ್ಧೀಕರಣ ಕಾರ್ಯವನ್ನು ಭರದಿಂದ ಸಾಗಿಸಿದರು. ಸ್ವತಃ ನಿರೀಶ್ವರವಾದಿಯಾಗಿದ್ದರು ಕೂಡ ಹಿಂದೂ ಸಮಾಜದಲ್ಲಿ ತಾಂಡವವಾಡುತ್ತಿದ್ದ ಅಸ್ಪೃಶ್ಯತೆಯನ್ನು ನಿರ್ಮೂಲನೆಗೊಳಿಸಲು ' ಪತಿತಪಾವನ ಮಂದಿರ'ವನ್ನು ನಿರ್ಮಿಸಿದರು. ' ಹಿಂದೂ ಪದಪಾದಶಾಹಿ' , ' ಹಿಂದುತ್ವ ' , ಹಾಗೂ ' ಮೋಪ್ಲಾ ಕಾಂಡ ' ಗಳೆಂಬ ಕೃತಿಗಳ ಮೂಲಕ ಹಿಂದುಗಳನ್ನು ಹಿಂದುತ್ವದ ಮೂಲಕ , ದೇಶ ಮೊದಲು ಅನಂತರ ಧರ್ಮ ಎನ್ನುವ ಈ ನೆಲದ ಸಂಸ್ಕೃತಿಯ ಆಧಾರದ ಮೇಲೆ ಸಂಘಟಿಸಿದರು.

* ಭಾರತವನ್ನು ಆತ್ಮನಿರ್ಭರಗೊಳಿಸಲು ಹಿಂದೂ ಸೈನಿಕೀಕರಣ

ಸ್ವಾತಂತ್ರ್ಯದ ಸನ್ನಿಹದಲ್ಲಿ ಭಾರತೀಯ ಸೇನೆಯಲ್ಲಿ ಮುಕ್ಕಾಲು ಪಾಲು ಪಠಾಣ್ ಸೈನಿಕರೇ ತುಂಬಿದ್ದು , ಮುಂದೊಂದು ದಿನ ದೇಶ ವಿಭಜನೆಗೊಂಡರೆ ಬಹುತೇಕ ಮುಸ್ಲಿಂ ಸೈನಿಕರು ಮುಸ್ಲಿಂಲೀಗ್ ಪ್ರತಿಪಾದಿತ ಪಾಕಿಸ್ತಾನದ ಸೈನ್ಯಕ್ಕೆ ಸೇರುತ್ತಾರೆ ಎಂಬುದನ್ನು ಮನಗಂಡ ಸಾವರ್ಕರ್ , ದೇಶದೆಲ್ಲೆಡೆ ಸಂಚರಿಸಿ ಹಿಂದೂ ಯುವಕರಿಗೆ ಸೈನ್ಯ ಸೇರ್ಪಡೆಗೆ ಕರೆಕೊಟ್ಟು " ಹಿಂದೂ ಮಿಲಿಟರೈಸೇಷನ್ ಬೋರ್ಡ್ " ಮೂಲಕ ಬೃಹತ್ ಸೈನೀಕರಣವನ್ನು ನಡೆಸಿದರು. ಮುಕ್ತನೇಮಕಾತಿಯಲ್ಲಿ ೬೦,೦೦೦ ಹಿಂದೂಗಳು ಸೇನೆಯನ್ನು ಸೇರಿದರು.ಭಾರತವನ್ನು 1948ರ ಯುದ್ಧದಲ್ಲಿ ಅಂದರೆ ದೇಶವಿಭಜನೆಯ ಮುಂದಿನ ವರ್ಷದ ಯುದ್ಧದಲ್ಲಿ ಜಯಗೊಳಿಸಲು ನೆರವಾದರು.

* ಛಿದ್ರ ಛಿದ್ರವಾಗಿ ಹೋಗಿದ್ದ ಹಿಂದುಗಳ ಸಂಘಟನೆ ಮೂಲಕ ಪರಕೀಯರ ವಿರುದ್ಧ ಹಿಂದೂ ಆತ್ಮನಿರ್ಭರತೆ

ಸಾವರ್ಕರ್ ಒಂದು ಕಡೆ ಕಾಂಗ್ರೆಸ್ ನ ದ್ವಂದ್ವ ನೀತಿ ಮತ್ತೊಂದೆಡೆ ಮುಸ್ಲಿಂಲೀಗ್ ನ ಧ್ರುವೀಕರ ನೀತಿಯ ವಿರುದ್ಧವಾಗಿ ಹೋರಾಟ ನಡೆಸಿದರು. ಮುಸ್ಲಿಂಲೀಗ್ ನ ಪ್ರತ್ಯೇಕ ಚುನಾವಣೆಯ ಧಾಳದ ವಿರುದ್ಧ ಸಮರ್ಥವಾಗಿ ಸಾವರ್ಕರ್ ಹೋರಾಟ ನಡೆಸಿದರು . ಕಾಶ್ಮೀರದ ಹಿಂದೂ ರಾಜನನ್ನು ಭೇಟಿಯಾಗಿ ಮುಸ್ಲಿಂ ಬಾಹುಳ್ಯವಿದ್ದರು ನೀವು ಭಾರತದಲ್ಲೇ ಇರಬೇಕು ಎನ್ನುವುದಾಗಿ ಸ್ಪಷ್ಟವಾಗಿ ನುಡಿದರೆ ಇನ್ನೊಂದೆಡೆ ಹೈದರಾಬಾದ್ನ ಹಿಂದೂ ಬಾಹುಳ್ಯ ರಾಜ್ಯದ ನಿಜಾಮನ ಹಿಂದೂ ವಿರೋಧಿ ನಡೆಗಳ ವಿರುದ್ಧ ಧ್ವನಿಯೆತ್ತಿ ಸಮರಸಾಧಿಸಿದರು. ದೇಶ ವಿಭಜನೆಯ ಸಮಯದಲ್ಲಿ ದೇಶದೆಲ್ಲೆಡೆ ಸಂಚರಿಸಿ ಬುಡಕಟ್ಟು ಸಮುದಾಯ, ಆರ್ಯಸಮಾಜವಾದಿಗಳು, ಜೈನರು , ಸಿಖ್ಖರು , ಲಿಂಗಾಯತರು, ಭಿಲ್ಲರು, ಸಂತಾಲರು ತಮ್ಮ ಧರ್ಮವನ್ನು ಹಿಂದೂ ಎಂಬುದಾಗಿ ನಮೂದಿಸುವಂತೆ ವಿನಂತಿಸಿ, ಭಾರತದಲ್ಲೇ ಅನೇಕ ಭೂಭಾಗಗಳನ್ನು ಉಳಿಸಲು ಪ್ರಯತ್ನಿಸಿದರು.

* ಭಾಷಾ ಆತ್ಮನಿರ್ಭರ

ಹಿಂದೀ ಭಾಷೆ ಹಾಗೂ ಮರಾಠಿ ಭಾಷೆಯಲ್ಲಿ ತುಂಬಿದ್ದ ಉರ್ದು ಪದಗಳನ್ನು ತೆಗೆಯುವುದು ಮತ್ತು ಹೊಸ ಹೊಸ ಹಿಂದೀ ಪದಗಳ ಕೊಡುಗೆ ನೀಡುವ ಭಾಷಾ ಶುದ್ಧೀಕರಣಕ್ಕೆ ಮಹತ್ವ ನೀಡಿದರು.

" ಹೇ ಮಾತೃಭೂಮಿ ತುಜಲಾ ಮನವಾಹಿಲೇ , ವತೃತ್ವ ವಾಗ್ ವಿಭವಹೀ ತುಜ ಅರ್ಪಿಯೇಲೇ"

ಹೇ ನನ್ನ ಮಾತೃಭೂಮಿಯೇ ನಿನಗಿದೋ ನನ್ನ ಸಂಪೂರ್ಣ ಶಬ್ಧ , ವಾಕ್ , ಬುದ್ದಿ , ಚಿಂತನೆ , ಕಾರ್ಯ ಅರ್ಪಿತ ಎಂಬುದಾಗಿ ಸಾವರ್ಕರ್ ತಮ್ಮ ಕವನದಲ್ಲಿ ವಿವರಿಸುತ್ತಾ ಕ್ರಾಂತಿಯ ಜ್ವಾಲೆಯಾಗಿ ವಸಾಹತ್ತುಶಾಹಿಗಳ ವಿರುದ್ದ ಮರಣಸದೃಶ ರಣಭೇರಿಯನ್ನು ಮೊಳಗಿಸಿ , ಚಾಮುಂಡಿಯಂತೆ ಶತ್ರುಗಳ ರಕ್ತಕ್ಕೋಸ್ಕರ ಹಪಹಪಿಸುತ್ತಿದ್ದ ಭಾರತಾಂಬೆಯ ಜಿಹ್ವೆಗೆ ನೆತ್ತರಿನ ತರ್ಪಣ ನೀಡಿದ ವ್ಯಕ್ತಿ ಸಾವರ್ಕರ್. ಬಹುಮುಖ ಮತ್ತು ಅಷ್ಟೇ ಸಂಕೀರ್ಣ ವ್ಯತಿತ್ವ ಸಾವರ್ಕರ್ ಅವರದ್ದು. ಒಬ್ಬ ವ್ಯಕ್ತಿ ಕವಿತೆ ಮತ್ತು ಭ್ರಾಂತಿಯನ್ನು ಒಟ್ಟಿಗೆ ತೆಗೆದುಕೊಂಡು ಹೋಗಲು ಸಾಧ್ಯ ಯಾಕೆಂದರೆ ಕವಿತೆ ಕಲ್ಪನೆಯ ಪ್ರತಿರೂಪ , ಆದರೆ ಕಲ್ಪನೆ ಬಿಟ್ಟು ನಿಜವಾಸ್ತವಿಕತೆಯ ಮೇಲೆ ಕವನವನ್ನು ಬರೆದು , ಕವಿತೆ ಹಾಗು ಕ್ರಾಂತಿಯನ್ನು ಜೊತೆಜೊತೆಗೆ ತೆಗೆದುಕೊಂಡು ಹೋಗಬಹುದು ಎಂಬುದಾಗಿ ಸಿದ್ಧಿಸಿದ ಕ್ಷಾತ್ರಪುಂಜ ಸಾವರ್ಕರ್. ಸ್ವಾಭಿಮಾನದ ಕಿಚ್ಚನ್ನು ಭಾರತೀಯರ ಮನಗಳಲ್ಲಿ ಜಜ್ವಾಲ್ಯಮಾನಗೊಳಿಸಿ , ಸ್ವಾತಂತ್ರ್ಯ ಕ್ರಾಂತಿಯನ್ನು ಆತ್ಮನಿರ್ಭರಗೊಳಿಸಿ , ಆತ್ಮವಿಸ್ಮೃತಿ ಹಾಗೂ ಆತ್ಮಗ್ಲಾನಿಗೊಂಡಿದ್ದ ಹೃದಯಾಂತರಾಳದಲ್ಲಿ ಸ್ವಾವಲಂಭನೆಯ ಕಿಡಿಯನ್ನು ಹಚ್ಚುದ ಸ್ವಾತಂತ್ರ್ಯವೀರ ಸಾವರ್ಕರ್ ನಿಜವಾಗಿಯೂ ಆತ್ಮನಿರ್ಭರ ಭಾರತದ ನಿರ್ಮಾತೃ...



ಕಿರಣ ಎಂ.ಪಿ.
1೦ನೇ ಸೆಮಿಸ್ಟರ್, 5 ವರ್ಷದ ಎಲ್.ಎಲ್.ಬಿ.

# ಸ್ವಾರ್ಥ ನಾಶವಾಗದೆ ಸ್ವಾತಮತ್ರ್ಯವಿಲ್ಲ

ಸ್ವಾತಂತ್ರ್ಯ ಎಂದಾಗ ನಮ್ಮಲ್ಲಿ ಹಲವು ರೀತಿಯ ಆಲೋಚನೆಗಳು ಒಮ್ಮೆಗೇ ಹಾದು ಹೋಂಗುತ್ತವೆ. ನೆನಪುಗಳ ಕೋಟೆಗಳು ಒಮ್ಮೆಲೆ ಎದ್ದು ಬಿಡುತ್ತವೆ ಇಂದಿಗೂ ನೆನಪಿದೆ ಆದಿನಗಳು ಎನ್ನುವ ಮೂಲಕ ಹಲವರ ಮಾತುಗಳು ಶುರುವಾಗುತ್ತವೆ. ಅವರಿಗೆ ಅರಿವಿಲ್ಲದೆ ಅವರ ಬಾಯಿಂದ ನೂರು ಕತೆಗಳು ಹೂರಡುತ್ತವೆ. ರೀತಿ ಸ್ವಾತಂತ್ರ್ಯ ಎನ್ನುವುದು ಹಲವು ಆಯಾಮದಲ್ಲಿ ಚರ್ಚಿಸಲ್ಪಡುವ ವಿಷಯವಾಗಿದೆ. ಮನುಷ್ಯ ಹುಟ್ಟವಾಗ ಸ್ವತಂತ್ರ ಅನಂತರ ಸಮಾಜದ ಕಟ್ಟಪಾಡುಗಳಿಗೆ ಬಂಧಿತನಾಗುತ್ತಾನೆ. ತನ್ನ ಜೀವನದ ಒಂದು ಘಟ್ಟದಲ್ಲಿ ತನ್ನ ಬಂಧನದ ಅರಿವಾಗಿ ಮತ್ತೆ ಸ್ವಾತಂತದ ಹುಡುಕುತ್ತಾ ಹೋಗುತ್ತಾನೆ. ಅವನ ಈ ನಾ ಪಯಣವನ್ನು ಬಂಧಿತ ಸಮಾಜ ಹುಚ್ಚುತನದ ಕನ್ನಡಕ ದರಸಿ ನೋಡುತ್ತದೆ'– ಈ ಸಾಲುಗಳು ತೀರಾ ವೈಯಕ್ತಿಕ ನೆಲೆಗಟ್ಟಿನಲ್ಲಿ ಚಿಂತನೆಗೆ ಒಳಪಡುವ ವಿಷಯ ಆದರೆ ಈ ಎಲ್ಲ ವಿಚಾರಗಳು ಹುಟ್ಟುವುದು ಸ್ವಾತಂತ್ರ್ಯದ ಚಿಂತನೆಯ ಅವಕಾಶದಲ್ಲಿ ಮಾತ್ರ. ನಾವು ನಮ್ಮನ್ನು ಅಳಿಸಿಕೊಳ್ಳಲು ನಿರ್ಮಿಸಿದ ವ್ಯವಸ್ಥೆ ಅಥವಾ ರಾಜ್ಯದ ಪರಿಕಲ್ಪನೆ ನಮಗೆ ಎಷ್ಟು ಸ್ವತಂತ್ರವಾಗಿ ಚಿಂತಿಸಲು ಅವಕಾಶ ಮಾಡಿ ಕೋಡುತ್ತವೆ. ಎನ್ನುವ ಆಧಾರದ ಮೇಲೆ ಈ ಮೇಲಿನ ಎಲ್ಲ ಸಾಲುಗಳು ನಿಂತಿವೆ.

ನಾವು ಇಂದು ಸ್ವತಂತ್ರ್ಯ ಭಾರತದ ಅಮೃತದ ಮಹೋತ್ಸವದ ಸಂಭ್ರದಲ್ಲಿ ನಿಂತು ಯೋಚನೆ ಮಾಡುವಾಗ,ನಮ್ಮ ಚಿಂತನೆಗಳು ಎಷ್ಟು ಸ್ವತಂತ್ರ್ಯವಾಗಿದೆ ಎನ್ನುವ ಒಂದು ಅಂಶ 1947 ರಲ್ಲಿ ಪಡೆದ ಸ್ವತಂತ್ರ್ಯದ ಸಾರ್ಥಕತೆಯನ್ನು ಹೇಳುತ್ತದೆ ಅಂದಿನಿಂದ ಇಂದಿನವರೆಗೆ ನಾವೆಷ್ಟು ಅಭಿವೃದ್ಧಿ ಹೊಂದಿದ್ದೇವೆ,ನಮ್ಮ ಬದುಕು ಎಷ್ಟು ಸುದಾರಿಸಿದೆ ಎನ್ನುವ ವಚಾರಗಳಿಗಿಂತ ನಮ್ಮನ್ನು ಬಂಧಿಸಿಟ್ಟವರ ಪ್ರಭಾವದಿಂದ ಎಷ್ಟು ಮುಕ್ತರಾಗಿದ್ದೇವೆ ಎನ್ನುವುದು ಬಹಳ ಪ್ರಮುಖವಾದುದು. ಈ ರೀತಿ ಯೋಚಿಸುವಾಗ ನಾವೇನು ಹೆಚ್ಚುಬದಲಾಗಿಲ್ಲ ಎಂದು ಅನಿಸುವುದುಂಟು. ನಮ್ಮಲ್ಲಿ ಇನ್ನು ದೊಡ್ಡ ದೊಡ್ಡ ಗೋಡೆಗಳು ಉರುಳುವುದು ಬಾಕಿ ಇದೆ. ಹಾಗೆಂದ ಮಾತ್ರಕ್ಕೆ ಅದೇನು ಒಮ್ಮೆಗೆ ಸಾದಿಸಲ್ಪಡುವ ವಿಚಾರವಲ್ಲ. ಅದು ಅನ್ನ ಬೇಯುವಷ್ಟೆ ನಿಧಾನವಾದ ಪ್ರಕ್ರಿಯೆ. ಇಲ್ಲಿ ನಮ್ಮ ರೂಢಿಗಳು ಹಾಗೂ ನಮ್ಮನ್ನು ಪ್ರಭಾವಿಸುವ ಮತ್ತು ಮೇನ್ನೋಟಕ್ಕೆ ಪ್ರಭಾವಿಸಿದಂತೆ ಕಾಣುವ ಹಲವು ವಿಚಾರಗಳು ಬದಲಾಗಬೇಕಿದೆ. ಸಂಜೆ ಕಾಲೇಜಿನಿಂದ ಮನೆಗೆ ಬರುವಾಗಲೋ,ಕೆಲಸ ಮುಗಿಸಿ ಮನೆ ಸೇರುವಾಗಲೂ ಒಮ್ಮೆ ನಾವು ನಡೆದು ಬರುತ್ತಿರುವ ರಸ್ತೆಯ ಬದಿಯನ್ನು ಗಮನಿಸಿದರೆ ಅರ್ಥವಾಗುತ್ತದೆ ನಾವೆಷ್ಟು ಸ್ವತಂತ್ರರು ಬದಲಾಗಿಲ್ಲ ಎಂದು. ಅಲ್ಲಿಬಿದ್ದಿರುವ ಕಸದ ಚೀಲಗಳು ಹೇಳುತ್ತವೆ ನಾವೆಷ್ಟು ಸ್ವತಂತ್ರರು ಎಂದು. ಪ್ರತಿಭಟನೆಯ ನೆಪದಲ್ಲಿ ಸುಟ್ಟ ಬಸ್ಸು ರೈಲುಗಳನ್ನು ನೊಡಿದರೆ ತಿಳಿಯತ್ತದೆ ನಾವೆಷ್ಟು ಸ್ವತಂತ್ರರು ಎಂದು. ನಾನು, ನಿನು ಎನ್ನುವ ಸ್ವಾರ್ಥ ಸಾಯದೆ ಸ್ವಾತಂತ್ರ ಹುಟ್ಟವುದಿಲ್ಲ.

ಇಲ್ಲಿ ಬದುಕಬೇಕಾದದ್ದು ನಾವು, ನಮ್ಮ ಸ್ವತಂತ್ರ. ಇದನ್ನು ಪಡೆಯಬೇಕಾದರೆ ನಾವು ಮೊದಲು ಸಾಧಿಸಭೇಕಾದದ್ದು ನಮ್ಮತನವನ್ನು, ನಮ್ಮ ಆಸ್ಮಿತೆಗಳ ಮೇಲಿನ ಪ್ರಿತಿಯನ್ನು ಹಾಗೂ ಮುಕ್ತ ಸಹಬಾಳ್ವೆಯನ್ನು.



ಗುರು ಪ್ರಕಾಶ್

10ನೇ ಸೆಮಿಸ್ಟರ್, 5 ವರ್ಷದ ಎಲ್ಎಲ್.ಬಿ.